# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಏಪ್ರಿಲ್ 30, 2021

ಸಂಪುಟ : 47 ಸಂಚಿಕೆ : 360 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




ದಾವಣಗೆರೆಯಲ್ಲಿ ಕೊರೊನಾ ಕರ್ಫ್ಯೂ ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದವು. ಆದರೆ ನಿನ್ನೆಗಿಂತ ಇಂದು ವಾಹನಗಳ ಸಂಚಾರ ತುಸು ಹೆಚ್ಚಾಗಿದ್ದುದು ಕಂಡು ಬಂತು.

# ಹಳ್ಳಿಗಳಲ್ಲಿ ಸೋಂಕು ತಡೆ ಹೊಣೆ ಗ್ರಾಮ ಪಂಚಾಯ್ತಿಗೆ

ಬೆಂಗಳೂರು, ಏ. 29 - ಸೋಂಕು ಹೆಚ್ಚಾಗುತ್ತಿದ್ದಂತೆ ನಗರ, ಪಟ್ಟಣಗಳಿಂದ ಜನ ಹಳ್ಳಿಗಳತ್ತ ವಲಸೆ ಹೋಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿ ಸೋಂಕು ತಡೆಗಟ್ಟಲು ಸ್ಥಳೀಯ ಪಂಚಾಯ್ತಿಗಳು ಹೊಣೆ ವಹಿಸಿಕೊಳ್ಳಬೇಕೆಂದು ಸರ್ಕಾರ ಸೂಚಿಸಿದೆ.

ಪಟ್ಟಣಗಳಿಂದ ಬಂದವರನ್ನು ಪತ್ತೆ ಹಚ್ಚಿ, ಅವರನ್ನು ಪರೀಕ್ಷೆಗೆ ಒಳಪಡಿಸುವ ಅಧಿಕಾರವನ್ನು ಪಂಚಾಯ್ತಿಗಳಿಗೆ ನೀಡಿದೆ.

ಅಷ್ಟೇ ಅಲ್ಲ ಇದಕ್ಕಾಗಿ ರಚನೆಗೊಂಡಿರುವ ಕಾರ್ಯಪಡೆ ಮೂಲಕ ಈ ಕಾರ್ಯವನ್ನು ನಿರ್ವಹಿಸಬೇಕೆಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಆದೇಶ ಮಾಡಿದ್ದಾರೆ.

ಸೋಂಕು ವ್ಯಾಪಕವಾಗಿ ಹರಡದಂತೆ ಈ ರೋಗಕ್ಕೆ ತುತ್ತಾಗಿ ದುರ್ಬಲರಾದವರನ್ನು ಹೋಂ ಕ್ವಾರಂಟೈನ್ ಮತ್ತು ಸೋಂಕಿತರನ್ನು ಮನೆಯಲ್ಲಿ ಪ್ರತ್ಯೇಕವಾಗಿ ಇರಿಸುವ ಬಗ್ಗೆ ನಿಗಾವಹಿಸಬೇಕು.

ಗ್ರಾಮೀಣ ಭಾಗದಲ್ಲಿ ಪ್ರಕರಣಗಳು ಹೆಚ್ಚಾಗುವುದನ್ನು ತಡೆಯಲು ಸ್ಥಳೀಯ ಎಲ್ಲಾ ಇಲಾಖೆಗಳನ್ನು ಬಳಕೆ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.



**ನಗರಗಳಲ್ಲಿ ಸೋಂಕು ನಿವಾರಕಗಳ ಸಿಂಪಡಣೆ** : ನಗರ, ಪಟ್ಟಣಗಳಲ್ಲಿ ಸೋಂಕು ನಿವಾರಕ ದ್ರಾವಣವನ್ನು ಸಿಂಪಡಿಸಲು ಮುಖ್ಯಮಂತ್ರಿಯವರು ಆದೇಶ ಮಾಡಿದ್ದಾರೆ.

ಉನ್ನತ ಮಟ್ಟದ ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಅಗ್ನಿಶಾಮಕ ಇಲಾಖೆಯ ವಾಹನಗಳನ್ನು ಬಳಕೆ ಮಾಡಿಕೊಂಡು ನಗರ, ಪಟ್ಟಣಗಳನ್ನು ಶುಚಿತ್ವಗೊಳಿಸಲಾಗುವುದು ಎಂದು ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಸ್ಯಾನಿಟೈಸರ್ ಮಾಡುವ ಕಾರ್ಯಕ್ಕೆ ಚಾಲನೆ ನೀಡುವಂತೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ ಎಂದರು.

ನಾಳೆಯಿಂದಲೇ ರಾಜ್ಯದ ಎಲ್ಲೆಡೆ ಸ್ವಚ್ಛತಾ ಮತ್ತು ಸ್ಯಾನಿಟೈಸರ್ ಕಾರ್ಯ ಆರಂಭಗೊಳ್ಳಲಿದೆ. (2ನೇ ಪುಟಕ್ಕೆ)

## ಕೊರೊನಾ ನಿರ್ಬಂಧ ಉಸ್ತುವಾರಿಗೆ ಐವರು ಎಡಿಜಿಪಿಗಳ ನೇಮಕ

ಬೆಂಗಳೂರು, ಏ. 29 - ಕೊರೊನಾ ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಜಾರಿಗೊಳಿಸಲಾಗಿರುವ 14 ದಿನಗಳ ಕರ್ಫ್ಯೂ ಸಂದರ್ಭದಲ್ಲಿ ವಿಧಿಸಲಾಗಿರುವ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ನಿರ್ಬಂಧಗಳ ಅನುಷ್ಠಾನ ಮೇಲುಸ್ತುವಾರಿಗೆ ಐದು ಜನ ಎಡಿಜಿಪಿ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

**ರಾಜ್ಯದ ಎಲ್ಲಾ ಕಾರಾಗೃಹಗಳನ್ನು ಸ್ಯಾನಿಟೈಸ್ ಮಾಡಲು ಸೂಚನೆ**

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಆರೋಗ್ಯ ಅಧಿಕಾರಿಗಳ ಜೊತೆ ಸಿಎಂ ನಡೆಸಿದ ವಿಡಿಯೋ ಕಾನ್ಫರೆನ್ಸ್ ಬಳಿಕ ಬೊಮ್ಮಾಯಿ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಕೊರೊನಾ ಕೆಲಸಕ್ಕಾಗಿ 8500 ಜನ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಬಳಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇನ್ನು ಹೆಚ್ಚಿನ ಸಿಬ್ಬಂದಿಯನ್ನು ಒದಗಿಸಲು ಸಿದ್ದರಿದ್ದೇವೆ ಎಂದು ಅವರು ತಿಳಿಸಿದರು.

ರಾಜ್ಯದ ಎಲ್ಲಾ ಕಾರಾಗೃಹಗಳನ್ನು ಸ್ಯಾನಿಟೈಸ್ ಮಾಡುವಂತೆ ಸೂಚಿಸಿದ್ದೇನೆ. ಜೈಲುಗಳಲ್ಲಿನ ಪಾಸಿಟಿವ್ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸೋಂಕಿತ ಕೈದಿಗಳನ್ನು ಪ್ರತ್ಯೇಕವಾಗಿ (3ನೇ ಪುಟಕ್ಕೆ)

# ಕುಂದುವಾಡ ಕೆರೆ ಕಾಮಗಾರಿಗೆ ತಡೆಯಾಜ್ಞೆ

ದಾವಣಗೆರೆ, ಏ. 29 - ಸ್ಮಾರ್ಟ್ ಸಿಟಿ ಯೋಜನೆಯಡಿ ನಡೆಸಲಾಗುತ್ತಿರುವ ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿಗೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿ ಅವೈಜ್ಞಾನಿಕವಾಗಿದೆ. ಜೀವ ವೈವಿಧ್ಯತೆ ಕಾಯ್ದೆ, ಅರಣ್ಯ ಕಾಯ್ದೆ ಸೇರಿದಂತೆ ಹಲವು ಕಾಯ್ದೆಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ, ನಗರದ ಯುವ ಭಾರತ್ ಗ್ರೀನ್ ಬ್ರಿಗೇಡ್ ಪರವಾಗಿ ಹೈಕೋರ್ಟ್‌ನಲ್ಲಿ ಕಳೆದ ಏಪ್ರಿಲ್ 5ರಂದು ಅರ್ಜಿ ದಾಖಲಿಸಿತ್ತು.

ವಕೀಲ ರಾಜೇಶ್ ಜಿ. ಭಟ್ ಅವರ ಮೂಲಕ



ಯುವ ಭಾರತ್ ಗ್ರೀನ್ ಬ್ರಿಗೇಡ್ ಪರವಾಗಿ ಅದರ ಅಧ್ಯಕ್ಷ ನಾಗರಾಜ ಸುರ್ವೆ ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಕೆರೆಯ ಆವರಣ ಇಲ್ಲವೇ 30 ಮೀಟರ್‌ಗಳ ಬಫರ್ ವಲಯದಲ್ಲಿ ಸೈಕಲ್ ಟ್ರ್ಯಾಕ್ ನಿರ್ಮಿಸದಂತೆ ತಡೆಯಾಜ್ಞೆ ಹೊರಡಿಸಿದೆ.

ಕೆರೆಯ ಗಾತ್ರವನ್ನೂ ಸಹ ಕಡಿಮೆ ಮಾಡಬಾರದು ಎಂದು ನಿರ್ಬಂಧಿಸಿರುವ ನ್ಯಾಯಾಲಯ, ವಿಚಾರಣೆಯನ್ನು ಜೂನ್ 24ಕ್ಕೆ ಮುಂದೂಡಿದೆ.

ಸ್ಮಾರ್ಟ್ ಸಿಟಿ ಹಾಗೂ ಕಾಮಗಾರಿ ಕೈಗೊಳ್ಳುತ್ತಿರುವ ಸಂಸ್ಥೆಗಳೂ ಸೇರಿದಂತೆ, ಒಟ್ಟು 12 ಪ್ರತಿವಾದಿಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಅರ್ಜಿದಾರ ನಾಗರಾಜ ಸುರ್ವೆ, ನ್ಯಾಯಾಲಯದ ಆದೇಶದ ಪ್ರತಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಸ್ಮಾರ್ಟ್ ಸಿಟಿಗೆ ತಲುಪಿಸಲಾಗಿದೆ (2ನೇ ಪುಟಕ್ಕೆ)

# ಒಂದು ರಾಷ್ಟ್ರ-ಒಂದು ಪಡಿತರ ಜಾರಿ

ಬೆಂಗಳೂರು, ಏ. 29 - ಅಂತ್ಯೋದಯ ಅನ್ನ ಅಥವಾ ಆದ್ಯತಾ ಪಡಿತರ ಚೀಟಿ ಹೊಂದಿರುವವರು ರಾಷ್ಟ್ರದ ಇಲ್ಲವೇ ರಾಜ್ಯದ ಯಾವುದೇ ಭಾಗದ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ, ಯೋಜನೆಯಡಿ ಈ ಫಲಾನುಭವಿಗಳು ತಮ್ಮ ಪಡಿತರ ಚೀಟಿ ಸಂಖ್ಯೆ, ಆಧಾರ್ ಸಂಖ್ಯೆ, ಹೆಬ್ಬೆರಳು ಗುರುತಿನಡಿ ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಬಹುದು.

ರಾಷ್ಟ್ರದ ಯಾವುದೇ ಭಾಗದ ಜನರು ಇಂತಹ ಯೋಜನೆಯಡಿ ಫಲಾನುಭವಿಗಳಾಗಿದ್ದರೆ, ಕರ್ನಾಟಕದಲ್ಲೂ ಪಡಿತರ ಪಡೆಯಲು ಅವಕಾಶ ಕೊಟ್ಟಿದೆ. ಕೇಂದ್ರ ಸರ್ಕಾರ ನೀಡಿರುವ ಸಹಾಯವಾಣಿ 14445ಕ್ಕೆ ಕರೆ ಮಾಡಿ, ಒಂದು ನಿರ್ದಿಷ್ಟ ರಾಜ್ಯ, ಜಿಲ್ಲೆ ಸ್ಥಳದಲ್ಲಿ ಪಡಿತರ ಪಡೆಯುವ ಬಗ್ಗೆ ನೋಂದಾಯಿಸಿಕೊಳ್ಳಬೇಕು.

ಹೊರ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ಪಡಿತರ ಪಡೆಯಲು ಬಯಸುವವರು ನಮ್ಮಲ್ಲಿನ ಆಹಾರ ಭದ್ರತೆ ಕಾಯ್ದೆಯಂತೆ ಪ್ರತಿ ಅಂತ್ಯೋದಯ ಅನ್ನ ಪಡಿತರ ಚೀಟಿಯ 35 ಕೆಜಿ ಅಕ್ಕಿ, ಆದ್ಯತಾ ಪಡಿತರ ಚೀಟಿ ಪ್ರತಿ ಸದಸ್ಯರಿಗೆ ತಲಾ 5 ಕೆಜಿ ಅಕ್ಕಿಯನ್ನು ಪ್ರತಿ ಕೆಜಿಗೆ 3 ರೂ ದರದಲ್ಲಿ ವಿತರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಹೇಳಿಕೆಯಲ್ಲಿ ತಿಳಿಸಿದೆ.

ಅಂತ್ಯೋದಯ ಪಡಿತರ ಚೀಟಿ ತಂದವರಿಗೆ ನ್ಯಾಯಬೆಲೆ ಅಂಗಡಿಯವರು ಪಡಿತರ ನಿರಾಕರಿಸಬಾರದು ಎಂದು ಆದೇಶ ಮಾಡಿದೆ.

## ಸ್ಥಳೀಯ ಚುನಾವಣೆಗಳ ಮತ ಎಣಿಕೆ ಇಂದು

ಬೆಂಗಳೂರು, ಏ. 29 - ಬಳ್ಳಾರಿ ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ 10 ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದೆ.

ರಾಮನಗರ, ಚನ್ನಪಟ್ಟಣ ನಗರಸಭೆಗಳು ಸೇರಿದಂತೆ 10 ನಗರ ಸ್ಥಳೀಯ ಸಂಸ್ಥೆಗಳಿಗೆ ಏ. 27ರಂದು ಚುನಾವಣೆಗೆ ಮತದಾನ ನಡೆದಿತ್ತು. ಆಯಾ ನಗರ ಸ್ಥಳೀಯ ಸಂಸ್ಥೆಗಳ ಕೇಂದ್ರ ಸ್ಥಾನದಲ್ಲಿ ಮತ ಎಣಿಕೆ ಪ್ರಕ್ರಿಯೆ ಆರಂಭವಾಗಲಿದೆ. ಹಳ್ಳಿಕೇರಿ ಪುರ ಸಭೆಯ 11 ವಾರ್ಡ್‌ಗಳು ಹಾಗೂ ಹಿರೇ ಕೆರೂರು ಪಟ್ಟಣ ಪಂಚಾಯಿತಿ ಒಂದು ವಾರ್ಡ್ ಗೂ ಅಂದೇ ಮತದಾನ ನಡೆದಿತ್ತು. ಈ ವಾರ್ಡ್ ಗಳ ಮತ ಎಣಿಕೆಯೂ ನಾಳೆ ನಡೆಯಲಿದೆ.

## ತ.ನಾಡು ಡಿಎಂಕೆ, ಕೇರಳದಲ್ಲಿ ಎಡ

### ಪಶ್ಚಿಮ ಬಂಗಾಳದಲ್ಲಿ ಬಿಜೆಪಿ - ಟಿಎಂಸಿ ಬಿರುಸಿನ ಸ್ಪರ್ಧೆ

**ಮತದಾನೋತ್ತರ ಸಮೀಕ್ಷೆ**

ನವದೆಹಲಿ, ಏ. 29 – ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಾಗೂ ತೃಣಮೂಲ ಕಾಂಗ್ರೆಸ್ ನಡುವೆ ತುರುಸಿನ ಸ್ಪರ್ಧೆ ಇರಲಿದ್ದರೆ, ಕೇರಳದಲ್ಲಿ ಎಡರಂಗ ಗೆಲುವು ಸಾಧಿಸಲಿದೆ ಮತ್ತು ಅಸ್ಸಾಂನಲ್ಲಿ ಬಿಜೆಪಿ ಗೆಲುವು ದಾಖಲಿಸಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ.

ತಮಿಳುನಾಡು ಚುನಾವಣೆಯಲ್ಲಿ ಡಿಎಂಕೆ ನೇತೃತ್ವದ ಪ್ರತಿಪಕ್ಷ ಅಧಿಕಾರಕ್ಕೆ ಬರಲಿದೆ. ಪುದುಚೆರಿಯಲ್ಲಿ ಕಾಂಗ್ರೆಸ್ ಸೋಲು ಕಾಣಲಿದೆ ಎಂದು ಸಮೀಕ್ಷೆಗಳು ಹೇಳಿವೆ.

ಪಶ್ಚಿಮ ಬಂಗಾಳದಲ್ಲಿ ನಡೆದ ಎಂಟು ಹಂತಗಳ ಚುನಾವಣೆ ಪೂರ್ಣಗೊಂಡ ಬೆನ್ನಲ್ಲೇ ಮತದಾನೋತ್ತರ ಸಮೀಕ್ಷೆಗಳನ್ನು ಪ್ರಕಟಿಸಲಾಗಿದೆ. ಅದರ ಅನ್ವಯ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ತುರುಸಿನ ಸ್ಪರ್ಧೆ ನಡೆಯಲಿದೆ.

ನೆರೆಯ ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಸುಲಭವಾಗಿ ಅಧಿಕಾರದಲ್ಲಿ ಮುಂದುವರೆಯಲಿದೆ ಎಂದು ಸಮೀಕ್ಷೆಗಳು ತಿಳಿಸಿವೆ.

ರಿಪಬ್ಲಿಕ್ - ಸಿ.ಎನ್.ಎಕ್ಸ್. ಸಮೀಕ್ಷೆಯ ಪ್ರಕಾರ, 294 ಸೀಟುಗಳ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 138-148 ಹಾಗೂ ತೃಣಮೂಲ ಕಾಂಗ್ರೆಸ್ (2ನೇ ಪುಟಕ್ಕೆ)

## ಕೋಟಿ ಲಸಿಕೆ ಖರೀದಿ: ಸಿಎಂ

ಬೆಂಗಳೂರು, ಏ. 29 – ರಾಜ್ಯ ಸರ್ಕಾರ ಒಂದು ಕೋಟಿ ಹೆಚ್ಚುವರಿ ಡೋಸ್‌ಗಳ ಲಸಿಕೆ ಖರೀದಿಸಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಲಸಿಕೆ ಖರೀದಿಗೆ ಈಗಾಗಲೇ ಆದೇಶ ಹೊರಡಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಇದುವರೆಗೂ ರಾಜ್ಯಕ್ಕೆ 99.40 ಲಕ್ಷ ಡೋಸ್ ಲಸಿಕೆ ಪೂರೈಸಿದ್ದು, ಇದರಲ್ಲಿ 93.50 ಲಕ್ಷ ಡೋಸ್ ಪೂರೈಕೆ ಮಾಡಲಾಗಿದೆ. ಇನ್ನೂ 5.9 ಲಕ್ಷ (2ನೇ ಪುಟಕ್ಕೆ)

## ಕೊವ್ಯಾಕ್ಸಿನ್ 400 ರೂ.ಗೆ ಇಳಿಕೆ

ನವದೆಹಲಿ, ಏ. 29 – ಭಾರತ್ ಬಯೋಟೆಕ್ ರಾಜ್ಯಗಳಿಗೆ ಪೂರೈಸುವ ತನ್ನ ಕೊವ್ಯಾಕ್ಸಿನ್ ಲಸಿಕೆಯ ಬೆಲೆಯನ್ನು ಈ ಹಿಂದೆ ಘೋಷಿಸಿದ್ದ 600 ರೂ.ಗಳಿಂದ 400 ರೂ.ಗಳಿಗೆ ಇಳಿಸಿದೆ.

ಸೆರಮ್ ಇನ್‌ಸ್ಟಿಟ್ಯೂಟ್ ತನ್ನ ಕೋವಿಶೀಲ್ಡ್ ಲಸಿಕೆಯ ಬೆಲೆಯನ್ನು 400 ರೂ.ಗಳಿಂದ 300 ರೂ.ಗಳಿಗೆ ಇಳಿಸಿದ ಬೆನ್ನಲ್ಲೇ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿರುವ ಅಪಾರ ಸವಾಲುಗಳನ್ನು ಪರಿಗಣಿಸಿ ಬೆಲೆ ಇಳಿಕೆ ಮಾಡಿರುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ.

# ಕೋವಿಡ್ ನಿಂದ ಜೈಲು ಹಕ್ಕಿಗಳ ರಕ್ಷಣೆಯೇ ಸವಾಲು

## ಜಿಲ್ಲಾ ಕಾರಾಗೃಹದಲ್ಲಿ 219 ವಿಚಾರಣಾಧೀನ ಖೈದಿಗಳು, ಸ್ಥಳದ ಅಭಾವ

**ಜಿ.ಎಸ್. ವಸಂತ್‌ಕುಮಾರ್**

ದಾವಣಗೆರೆ, ಏ.29- ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವ ಕೊರೊನಾ ಮಹಾಮಾರಿಯಿಂದ ಜಿಲ್ಲಾ ಕಾರಾಗೃಹದಲ್ಲಿನ ವಿಚಾರಣಾಧೀನ ಖೈದಿಗಳನ್ನು ರಕ್ಷಿಸುವುದೇ ಸವಾಲಿನ ಕೆಲಸವಾಗಿದೆ.

ಹೌದು, ಒಂದೆಡೆ ದಿನೇ ದಿನೇ ಹೆಚ್ಚಾಗುತ್ತಿರುವ ಕೋವಿಡ್ ಸೋಂಕು. ಮತ್ತೊಂದೆಡೆ ಸ್ಥಳಾವಕಾಶದ ಕೊರತೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಚಾರಣಾಧೀನ ಖೈದಿಗಳ ಜೀವ ರಕ್ಷಿಸುವುದು ನಮ್ಮ ಹೊಣೆ. ಅದಕ್ಕಾಗಿ ಹಗಲು ಇರುಳು ಶ್ರಮಿಸುತ್ತಿದ್ದೇವೆ ಎಂಬುದು ಜಿಲ್ಲಾ ಕಾರಾಗೃಹದ ಸಹಾಯಕ ಅಧೀಕ್ಷಕ ಕರ್ಣ ಬಿ. ಕ್ಷತ್ರಿ ಅವರ ಮಾತು.

'ಜನತಾವಾಣಿ' ಯೊಂದಿಗೆ ಕಾರಾಗೃಹದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ ಅವರು, ಕೊರೊನಾದಂತಹ ಸಾಂಕ್ರಾಮಿಕ ರೋಗಗಳು ಬಂದಾಗ ಕಾರಾಗೃಹಗಳನ್ನು ನಿಭಾಯಿಸುವುದು ಸುಲಭದ ಮಾತಲ್ಲ ಎಂದರು.

ನಗರದ ಮಧ್ಯ ಭಾಗದಲ್ಲಿ ಕಾರಾಗೃಹ ಇರುವ ಕಾರಣ ದಿನದ 24 ಗಂಟೆಗಳ ಕಾಲವೂ ಸಿಬ್ಬಂದಿಗಳ ಸರ್ಪಗಾವಲು ಹಾಕಲಾಗಿದೆ ಎಂದು ಹೇಳಿದರು.

ಕಾರಾಗೃಹದಲ್ಲಿ ಅಧಿಕೃತವಾಗಿ 170 ಜನ ಖೈದಿಗಳಿಗೆ ಇರಲು ಸ್ಥಳಾವಕಾಶ ಇದೆ. ಆದರೆ, ಸದ್ಯ 219 ಮಂದಿ ವಿಚಾರಣಾಧೀನ ಖೈದಿಗಳಿದ್ದಾರೆ. ಸಣ್ಣಪುಟ್ಟ ವಿಚಾರಣೆ ಇದ್ದರೆ ಬೇಗನೇ ವಿಚಾರಣೆ ಮುಗಿದು ಕಾರಾಗೃಹದಿಂದ ಮುಕ್ತರಾಗುತ್ತಾರೆ. ದೊಡ್ಡ ವಿಚಾರಣೆಗಳಿದ್ದ ಖೈದಿಗಳು ಆ ವಿಚಾರಣೆ ಮುಗಿಯುವವರೆಗೂ ಇರಬೇಕಾಗುತ್ತದೆ ಎಂದರು.

ಖೈದಿಗಳ ಸಂಖ್ಯೆಗೆ ಅನುಗುಣವಾಗಿ ಸ್ಥಳಾವಕಾಶ ಇಲ್ಲದ ಕಾರಣ ಎಲ್ಲರನ್ನೂ ಒಂದೇ ಕಡೆ ಇರಿಸಬೇಕಾಗುತ್ತದೆ. ಇದರಿಂದಾಗಿ ಅವರು ದೈಹಿಕ ಅಂತರ ಕಾಪಾಡಿಕೊಳ್ಳುವುದು ಕಷ್ಟ. ಇಂತಹ ಕಷ್ಟಕರ ಪರಿಸ್ಥಿತಿಯಲ್ಲೂ ಸದ್ಯಕ್ಕೆ ಯಾವುದೇ




ಖೈದಿಗಳಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡಿಲ್ಲ ನಾವು ಕೋವಿಡ್ ಮಾರ್ಗಸೂಚಿಯನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದೇವೆ ಎಂದರು.

**ಮೊದಲ ಅಲೆಯಲ್ಲಿ ಐವರಿಗೆ ಕೊರೊನಾ:** ಜೈಲಿನಲ್ಲಿ ಮುಂಜಾಗ್ರತಾ ಕ್ರಮವಾಗಿ ರೆಡ್ ಜೋನ್, ಆರೆಂಜ್ ಜೋನ್ ಹಾಗೂ ಗ್ರೀನ್ ಜೋನ್‌ಗಳನ್ನಾಗಿ ವಿಂಗಡಿಸಿ ವಿಭಾಗಗಳನ್ನು ಮಾಡಲಾಗಿದೆ.

ಈ ಹಿಂದೆ ಮೊದಲ ಅಲೆಯ ಸಂದರ್ಭದಲ್ಲಿ ಹೊರಗಿನಿಂದ ಬಂದ ಹೊಸ ಐವರು ಖೈದಿಗಳಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು. ಅಂತಹ ಸಂದರ್ಭದಲ್ಲಿ ಅವರಿಗೆ 10ರಿಂದ 12 ದಿನ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ಕಾರಾಗೃಹಕ್ಕೆ ತಂದ ಮೇಲೂ ಸಹ ಇತರೆ ಖೈದಿಗಳೊಂದಿಗೆ ಬೆರೆಯಲು ಬಿಡದೇ 14 ದಿನ ಜೈಲಿನಲ್ಲೇ ಪ್ರತ್ಯೇಕ ಕೊಠಡಿಯಲ್ಲಿ ಕ್ವಾರಂಟೈನ್ ಮಾಡಲಾಗಿತ್ತು. ರೋಗದ ಲಕ್ಷಣ ಕಾಣಿಸಿಕೊಳ್ಳದೇ ಇದ್ದ ನಂತರವೇ ಅವರನ್ನು ಸಾಮಾನ್ಯ ಸೆಲ್‌ಗಳಿಗೆ ಕಳುಹಿಸಲಾಗಿತ್ತು ಎಂದು ಕರ್ಣ ಬಿ. ಕ್ಷತ್ರಿ ನೆನಪಿಸಿಕೊಂಡರು.

### ತುರ್ಚಘಟ್ಟ ಬಳಿ 10 ಎಕರೆ ಪ್ರದೇಶದಲ್ಲಿ ನೂತನ ಕಾರಾಗೃಹಕ್ಕೆ ಪ್ರಸ್ತಾವನೆ

**ದಾವಣಗೆರೆ ತಾಲ್ಲೂಕಿನ ತುರ್ಚಘಟ್ಟ ಗ್ರಾಮದ ಬಳಿ 10 ಎಕರೆ ಪ್ರದೇಶದಲ್ಲಿ ನೂತನ ಕಾರಾಗೃಹ ನಿರ್ಮಾಣಕ್ಕಾಗಿ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.**



**ಕೊರೊನಾದಿಂದಾಗಿ ಬಜೆಟ್‌ನಲ್ಲಿ ಅನುದಾನ ಇಲ್ಲದ ಕಾರಣ ಯೋಜನೆ ಸ್ಥಗಿತಗೊಂಡಿದೆ. ಕಾರಾಗೃಹದಲ್ಲಿನ ಸ್ಥಳಾವಕಾಶದ ಕೊರತೆ ಬಗ್ಗೆ ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲೂ ಗಮನಕ್ಕೆ ತರಲಾಗಿದೆ. ಅನಿರೀಕ್ಷಿತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಖೈದಿಗಳಿಗೆ ಕೊರೊನಾ ಕಂಡು ಬಂದ ಸಂದರ್ಭದಲ್ಲಿ ಸೋಂಕಿತರನ್ನು ಕ್ವಾರಂಟೈನ್ ಮಾಡಲು ಸ್ಥಳೀಯವಾಗಿ ಸಮುದಾಯ ಭವನ, ಇಲ್ಲವೇ ಕಲ್ಯಾಣ ಮಂಟಪ ಮೀಸಲಿಡುವ ಸಂಬಂಧ ಮನವಿ ಮಾಡಲಾಗಿದೆ. ಇದಕ್ಕೆ ಜಿಲ್ಲಾಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಜಿಲ್ಲಾ ಕಾರಾಗೃಹದ ಸಹಾಯಕ ಅಧೀಕ್ಷಕ ಕರ್ಣ ಬಿ. ಕ್ಷತ್ರಿ ಹೇಳಿದರು.**

**ಸಿಬ್ಬಂದಿಗಳಿಗೆ ವಸತಿ ಗೃಹಗಳ ಕೊರತೆ:** ಕಾರಾಗೃಹದಲ್ಲಿ 42 ಮಂದಿ ಅಧಿಕಾರಿ, ಸಿಬ್ಬಂದಿಗಳಿದ್ದಾರೆ. ಅವರಲ್ಲಿ ಕೇವಲ 10 ಜನಕ್ಕೆ ಮಾತ್ರ ವಸತಿ ಗೃಹಗಳು (2ನೇ ಪುಟಕ್ಕೆ)

# ಲಾಕ್‌ಡೌನ್ ನಿಯಮ ಸಡಿಲಿಕೆಗೆ ಸಿಎಂಗೆ ರೇಣುಕಾಚಾರ್ಯ ಮನವಿ

ದಾವಣಗೆರೆ, ಏ. 29 - ರೈತರ ಹಿತದೃಷ್ಟಿಯಿಂದ ಲಾಕ್‌ಡೌನ್ ನಿಯಮವನ್ನು ಸಡಿಲಗೊಳಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶಾಸಕ ಎಂ.ಪಿ. ರೇಣುಕಾಚಾರ್ಯ ಮನವಿ ಮಾಡಿದ್ದಾರೆ.

ಬೆಂಗಳೂರಿನ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಯಡಿಯೂರಪ್ಪನವರನ್ನು ಭೇಟಿ ಮಾಡಿ ರೇಣುಕಾಚಾರ್ಯ ಮನವಿ ಮಾಡಿದ್ದು, ಇದಕ್ಕೆ ಮುಖ್ಯಮಂತ್ರಿಗಳ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಗಿದೆ. ಲಾಕ್‌ಡೌನ್ ನಿಯಮದಂತೆ ಬೆಳಗ್ಗೆ 6 ರಿಂದ 10 ಗಂಟೆಯವರೆಗೆ ಹಣ್ಣು, ತರಕಾರಿ ಕೊಳ್ಳಲು ಹಾಗೂ ಮಾರಲು ಅವಕಾಶ ಮಾಡಿಕೊಟ್ಟಿದ್ದು, ಇದು



ಸ್ವಲ್ಪಮಟ್ಟಿಗೆ ಅನಾನುಕೂಲ ಉಂಟು ಮಾಡಿದ್ದು, ಲಾಕ್‌ಡೌನ್ ನಿಯಮವನ್ನು ರೈತರ ಹಿತದೃಷ್ಟಿಯಿಂದ ಬೆಳಗ್ಗೆ 6 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಸಡಿಲಿಸುವಂತೆ ಮುಖ್ಯಮಂತ್ರಿಗಳಿಗೆ ರೇಣುಕಾಚಾರ್ಯ ಮನವಿ ಮಾಡಿದ್ದಾರೆ.

ಹೊನ್ನಾಳಿ - ನ್ಯಾಮತಿ ಅವಳಿ ತಾಲೂಕಿನಲ್ಲಿ 880 ಹೆಕ್ಟೇರ್ ಪ್ರದೇಶದಲ್ಲಿ ತರಕಾರಿಯನ್ನು ಬೆಳೆಯಲಾಗುತ್ತದೆ. ಇಲ್ಲಿ ಬೆಳೆದ ತರಕಾರಿಯನ್ನು ಮಂಗಳೂರು, (3ನೇ ಪುಟಕ್ಕೆ)

# ಲಕ್ಷಣಗಳಿದ್ದು ನೆಗೆಟಿವ್ ಬಂದರೂ ಕೊರೊನಾ ಪಾಸಿಟಿವ್ ಎಂದು ಪರಿಗಣನೆ

ಬೆಂಗಳೂರು, ಏ. 30 – ಕೊರೊನಾ ಟೆಸ್ಟ್ ಮಾಡಿಸಿದಾಗ ನೆಗೆಟಿವ್ ಬಂದರೂ ಸಹ, ಸೋಂಕಿನ ಲಕ್ಷಣಗಳು ಕಂಡು ಬಂದರೆ ಅಂಥವರನ್ನು ಪಾಸಿಟಿವ್ ಎಂದೇ ಪರಿಗಣಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಈ ಬಗ್ಗೆ ಆದೇಶ ಹೊರಡಿಸಿದ್ದು, ಇಂತಹ ರೋಗಿಗಳಿಗೆ ಕೊರೊನಾದ ರೋಗಿ ಸಂಖ್ಯೆಯನ್ನೂ ಸಹ ನೀಡಲಾಗುವುದು. ಇವರಿಗೆ ಈಗಿರುವ ಕೊರೊನಾ ವ್ಯವಸ್ಥೆಯಡಿಯಲ್ಲೇ ಚಿಕಿತ್ಸೆ ನೀಡಲಾಗುವುದು.

ಈ ಬಗ್ಗೆ ಹೇಳಿಕೆ ನೀಡಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಹಲವು ಪ್ರಕರಣಗಳಲ್ಲಿ ಆರ್‌ಟಿ- ಪಿಸಿಆರ್ ಅಥವಾ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿಸಿದರೂ ನೆಗೆಟಿವ್ ವರದಿ ಬರುತ್ತಿದೆ. ವ್ಯಕ್ತಿಗೆ ಕೊರೊನಾ ರೋಗ ಲಕ್ಷಣವಿದ್ದರೂ ವರದಿಯಲ್ಲಿ ನೆಗೆಟಿವ್ ಬರುವುದರಿಂದ, ರೋಗ ತೀವ್ರತೆ ಹೆಚ್ಚಾದ ಸಮಯದಲ್ಲಿ (3ನೇ ಪುಟಕ್ಕೆ)

## ಸಾಮಾಜಿಕ ಹೋರಾಟಗಾರ, ಯುವ ಉದ್ಯಮಿ

# ಶಶಿಧರ್ ಹೆಮ್ಮನಬೇತೂರು



**ಯುವಕರಲ್ಲಿ ಧಾರ್ಮಿಕ, ನೈತಿಕ ಭಾವನೆ ಪ್ರಜ್ಞೆ ಮೂಡಿಸಲು ಲಿಂಗದೀಕ್ಷೆ ಕಾರ್ಯಕ್ರಮ, ಸಾಮೂಹಿಕ ವಿವಾಹ ಮಹೋತ್ಸವ, ನೀರಾವರಿ ಹೋರಾಟ, ಸಾಮಾಜಿಕ ಚಳವಳಿ, ಶಿವ ಚಿಂತನ ಶಿಬಿರ, ಬಡ ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಕಲಿಕೋಪಕರಣಗಳ ವಿತರಣೆ ಮುಂತಾದ ಹತ್ತು ಹಲವು ಚಟುವಟಿಕೆಗಳ ಮೂಲಕ 'ಶಿವಸೈನ್ಯ'ವು ದಾವಣಗೆರೆ ಜಿಲ್ಲೆಯಲ್ಲಿ ಸಕ್ರಿಯವಾಗಿದೆ. ಈ 'ಶಿವಸೈನ್ಯ'ದ ಕ್ರಿಯಾಶೀಲತೆಯಲ್ಲಿ ಶಶಿಧರ ಹೆಮ್ಮನಬೇತೂರು.**

**2008 ಮತ್ತು 2020ರಲ್ಲಿ ಸಮಾಜದಲ್ಲಿ ಅಹಿತಕರ ಘಟನೆಗಳು ನಡೆದಾಗ ಶಶಿಧರ್ ಐದು ದಿನಗಳಂತೆ ಎರಡು ಸಲ ಸೆರೆಮನೆ ವಾಸ ಅನುಭವಿಸಬೇಕಾಯಿತು.**










2004ರಲ್ಲಿ ದಾವಣಗೆರೆ ನಗರದಲ್ಲಿ 'ಶಿವಸೈನ್ಯ' ಎಂಬ ಯುವಕ ಸಂಘ ಹುಟ್ಟಿಕೊಂಡಿತು. ಆಗ ಅನೇಕರಿಗೆ ಇದು 'ಶಿವಸೇನೆಯೋ... ? ಶಿವಸೈನ್ಯವೋ.....' ಎಂಬ ಗೊಂದಲ. ಆ ನಂತರದ ದಿನಗಳಲ್ಲಿ 'ಶಿವಸೈನ್ಯ'ದ ಯುವಕರು ನಡೆದ ಹಾದಿ, ಕೈಗೊಂಡ ಸಾಮಾಜಿಕ ಕೆಲಸಗಳು ಗೊಂದಲದಲ್ಲಿದ್ದವರು ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಡುವಂತಾಯಿತು. ಯುವಕರಲ್ಲಿ ಧಾರ್ಮಿಕ, ನೈತಿಕ ಭಾವನೆಯ ಪ್ರಜ್ಞೆ ಮೂಡಿಸಲು ಲಿಂಗದೀಕ್ಷೆ ಕಾರ್ಯಕ್ರಮ, ಸಾಮೂಹಿಕ ವಿವಾಹ ಮಹೋತ್ಸವ, ಶಿವ ಚಿಂತನ ಶಿಬಿರಗಳು, ನೀರಾವರಿ ಹೋರಾಟ, ಬಡ ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಕಲಿಕೋಪಕರಣಗಳ ವಿತರಣೆ ಮುಂತಾದ ಹತ್ತು ಹಲವು ಚಟುವಟಿಕೆಗಳ ಮೂಲಕ 'ಶಿವಸೈನ್ಯ'ವು ದಾವಣಗೆರೆ ಜಿಲ್ಲೆಯಲ್ಲಿ ಸಕ್ರಿಯವಾಗಿದೆ. ಈ 'ಶಿವಸೈನ್ಯ'ದ ಕ್ರಿಯಾಶೀಲತೆಯ ಶಶಿಧರ ಹೆಮ್ಮನಬೇತೂರು.

ಹಣ, ಆಸ್ತಿ, ಅಧಿಕಾರ, ಹೆಸರು, ಕೀರ್ತಿ, ಪ್ರಶಸ್ತಿ, ಕುಟುಂಬ ನಿರ್ವಹಣೆ ಎಂಬ ಸ್ವಾರ್ಥದ ಸುತ್ತುಕೋಟೆಯಲ್ಲಿಯೇ ಬಹುತೇಕ ಇಂದಿನ ಯುವಜನ ಗಿರಿಕಿ ಹಾಕುತ್ತಿರುತ್ತಾರೆ. ಆದರೆ ಇವುಗಳಿಗಿಂತ ಭಿನ್ನವಾಗಿ ನಿಲ್ಲುವ ಯುವಕ ಶಶಿಧರ್. ಕವಿ ಗೋಪಾಲಕೃಷ್ಣ ಅಡಿಗರು ತಮ್ಮದೊಂದು ಕವಿತೆಯಲ್ಲಿ 'ಏನನ್ನಾದರು ಮಾಡುತ್ತಿರು ತಮ್ಮಾ..., ನೀ ಸುಮ್ಮನೆ ಕೂರಬೇಡ....' ಎಂದು ಹೇಳಿದ್ದಾರೆ. ಆ ಮಾತಿನಂತೆ ಸದಾ ಒಂದಿಲ್ಲೊಂದು ಕ್ರಿಯೆಯಲ್ಲಿ ತೊಡಗಿರುವ ಶಶಿಧರ್ ಗೆ ಹಗಲು - ರಾತ್ರಿ ತಲೆ ತುಂಬಾ ಸಾಮಾಜಿಕ ಚಿಂತನೆಗಳು. ಹಾಗಾಗಿ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಮಗ್ನ.

ರೈತ ಪರ ಕಾಳಜಿ ಮತ್ತು ಸಮಾಜ ಮುಖಿ ಸೇವೆಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಕೈಗೊಂಡ ಮದ್ಯಪಾನ ನಿಷೇಧ ಆಂದೋಲನದ ಸಂದರ್ಭದಲ್ಲಿ ಆಗಿನ್ನು ಶಶಿಧರ್‌ಗೆ 16ರ ಹರೆಯ. ಆಗಲೇ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಅಲ್ಲಿಂದಲೇ ಶ್ರೀಮಠದ ಪೂಜ್ಯರುಗಳ ಸಂಪರ್ಕಕ್ಕೆ ಬಂದ ಶಶಿಧರ್ ತನ್ನ 22ನೇ ವಯಸ್ಸಿನಲ್ಲಿ 'ಶಿವಸೈನ್ಯ' ಸಂಘಟನೆಯನ್ನು ಹುಟ್ಟು ಹಾಕಿದರು.

'ಯೌವ್ವನದ ಶಕ್ತಿ, ಸಾಹಸಗಳು, ಆಸೆ, ಅಕಾಂಕ್ಷೆಗಳು ಒಂದು ಪ್ರವಾಹವಿದ್ದಂತೆ, ಯೋಗ್ಯ ಅಣೆಕಟ್ಟು ನಿರ್ಮಿಸಿ ಅವುಗಳನ್ನು ಸೂಕ್ತ ನಾಲೆಯಲ್ಲಿ ಹರಿಸದಿದ್ದರೆ ಈ ಪ್ರವಾಹ ಹುಚ್ಚೆದ್ದು ಹರಿಯುತ್ತದೆ' ಎಂದು ಸ್ವಾಮಿ ವಿವೇಕಾನಂದರು ಒಂದೆಡೆ ಹೇಳುತ್ತಾರೆ. ಆ ಪ್ರಕಾರವಾಗಿ ಈ ಯುವ ಸಂಘಟನೆಯನ್ನು ಸಮಾಜಮುಖಿ ಕಾರ್ಯದಲ್ಲಿ ತೊಡಗಿಸುವ ಸಲುವಾಗಿ **ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮಾರ್ಗದರ್ಶನದಂತೆ** ಸಾಣೇಹಳ್ಳಿ ಶ್ರೀಮಠದ ಪೂಜ್ಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಮಾಗನೂರು ಉಮೇಶ್ ಗೌಡ, ಶಶಿಧರ್ ಹೆಮ್ಮನಬೇತೂರು ಮತ್ತು ಲಿಂಗರಾಜ್ ಅಗಸನಕಟ್ಟೆ ನೇತೃತ್ವದಲ್ಲಿ 30 ಜನ ಯುವಕರ ಈ ಗುಂಪಿಗೆ ಸಾಂಘಿಕ ರೂಪ ನೀಡುತ್ತಾರೆ. ಅಲ್ಲಿಂದ ಶಶಿಧರ್ ಸಂಘಟನೆಯ ಅಧ್ಯಕ್ಷರಾಗಿ ಅನೇಕ ಜನಪರ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

2004ರಲ್ಲಿ ಸಿರಿಗೆರೆ ಗ್ರಾಮದಲ್ಲಿ ಬೆಂಕಿ ದುರಂತ ಸಂಭವಿಸಿದಾಗ ಅಲ್ಲಿಯ ರೈತರ ಜಾನುವಾರುಗಳಿಗೆ ದಾವಣಗೆರೆ ಸುತ್ತಮುತ್ತಲ ಗ್ರಾಮಗಳಿಂದ ಮೇವು ಸಂಗ್ರಹಿಸಿ ಕಳುಹಿಸಿದರು. 2006ರಲ್ಲಿ ದಾವಣಗೆರೆ ಜಿಲ್ಲೆಯ 22 ಕೆರೆಗಳಿಗೆ ನೀರು ತುಂಬಿಸಲು ಹೋರಾಟ ನಡೆದಾಗ ಶಿವಸೈನ್ಯದ ಯುವಕರು ಶಶಿಧರ್ ನೇತೃತ್ವದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ. ಈ ಸಲುವಾಗಿ ಸರ್ಕಾರದ ಗಮನ ಸೆಳೆಯಲು ಸತ್ಯಾಗ್ರಹದಲ್ಲೂ ಭಾಗವಹಿಸುತ್ತಾರೆ. 2008ರಲ್ಲಿ ಮತ್ತು 2020ರಲ್ಲಿ ಸಮಾಜದಲ್ಲಿ ಅಹಿತಕರ ಘಟನೆಗಳು ನಡೆದಾಗ ಎಸ್.ಟಿ. ವೀರೇಶ್ (ಇಂದಿನ ಮಹಾನಗರ ಪಾಲಿಕೆ ಮೇಯರ್) ಮತ್ತು ಲಿಂಗರಾಜ್ ಅಗಸನಕಟ್ಟೆ ಜೊತೆಯಲ್ಲಿ ಶಶಿಧರ್ ಐದು ದಿನಗಳಂತೆ ಎರಡು ಸಲ ಸೆರೆಮನೆ ವಾಸ ಅನುಭವಿಸಬೇಕಾಯಿತು. ಸಿರಿಗೆರೆ ಬೃಹನ್ಮಠದ ಚರಪಟ್ಟಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರಿಗೆ ಗುರು ವಂದನಾ ಕಾರ್ಯಕ್ರಮ ಏರ್ಪಡಿಸಿ, ಗುರುಭಕ್ತಿ ತೋರಿಸಿದ್ದರು. 2009ರಲ್ಲಿ ತರಳಬಾಳು ಹುಣ್ಣಿಮೆ ನಡೆದಾಗ 2500 ಯುವಕರು ಬೈಕ್ ರ್‍ಯಾಲಿಯ ಮೂಲಕ ಶ್ರೀ ತರಳಬಾಳು ಜಗದ್ಗುರುಗಳನ್ನು ದಾವಣಗೆರೆ ನಗರಕ್ಕೆ ಸ್ವಾಗತಿಸಿದ್ದು, ಮರೆಯಲಾರದ್ದು. ಗೋಹತ್ಯೆ ಖಂಡಿಸಿ ಪ್ರತಿಭಟನೆ, ಜನಪ್ರತಿನಿಧಿಗಳಿಗೆ ಗೌರವ ಸಮರ್ಪಣೆ. ಹೀಗೆ ಕಳೆದ 20 ವರ್ಷಗಳಿಂದ ಹಲವಾರು ಸಾಮಾಜಿಕ ಕೆಲಸಗಳನ್ನು 'ಶಿವಸೈನ್ಯ'ದ ಮೂಲಕ ಶಶಿಧರ್ ಹೆಮ್ಮನಬೇತೂರು ಅವರು ಹಮ್ಮಿಕೊಂಡಿರುವ ಕಾರ್ಯಗಳು ಶ್ಲಾಘನೀಯವಾದವು.



2010ರಲ್ಲಿ ದಾವಣಗೆರೆ ತಾಲ್ಲೂಕಿನ ರೈತರನ್ನು ಸಂಘಟಿಸಿ, ಮೆಕ್ಕೆಜೋಳ ಮತ್ತು ಭತ್ತಕ್ಕೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಹೋರಾಟ ಮಾಡಿದ್ದನ್ನು ಯಾರೂ ಮರೆಯುವಂತಿಲ್ಲ. ಆಗ ಒಂದು ತಿಂಗಳು ನಿರಂತರ ಪ್ರತಿಭಟನೆ ಮಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗಮನ ಸೆಳೆಯುವಂತೆ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ಮಾಡಿದ್ದು ಐತಿಹಾಸಿಕವಾದುದು.

ಅನುಭವ ಮಂಟಪದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದ ಆವರಣದಲ್ಲಿ ಶ್ರೀ ಲಿಂ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಪ್ರತಿಮೆ (ಸಾದರ ನೌಕರರ ಬಳಗದ ಕೊಡುಗೆ) ಸ್ಥಾಪಿಸಲು ಮುಖ್ಯ ಕಾರಣಕರ್ತರು.

ಹೆಮ್ಮನಬೇತೂರು, ವಿಶ್ವಬಂಧು ಮರುಳಸಿದ್ಧರ ಕಾರ್ಯಕ್ಷೇತ್ರ. ಯಜ್ಞ-ಯಾಗಗಳ ವಿರುದ್ಧ ಪ್ರತಿಭಟಿಸಿದ್ದಕ್ಕೆ ವರ್ಣವಾದಿಗಳು ಮರುಳಸಿದ್ಧರ ಕೈಕಾಲುಗಳನ್ನು ಕಟ್ಟಿ, ಸುಣ್ಣದ ಹಗೇವಿಗೆ ಹಾಕಿ ಶಿಕ್ಷಿಸಿದ್ದರು. ಅಂತಹ ಕ್ರಾಂತಿಯ ನೆಲದಿಂದ ಬಂದ ಶಶಿಧರ್‌ಗೆ ಸದಾ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಸಮಾಜದ ಬಗ್ಗೆ ಅಪಾರ ಗೌರವ, ರೈತಪರ ಚಿಂತನೆ, ಬಡವರ ಬಗ್ಗೆ ಕಳಕಳಿ, ಸ್ವಸ್ಥ ಸಮಾಜದ ನಿರ್ಮಾಣದ ಕನಸುಗಳು. ಹೆಮ್ಮನಬೇತೂರಿನ ಶ್ರೀ ಬಿ.ಎಸ್. ರೇವಣಸಿದ್ದಪ್ಪ ಮತ್ತು ಶ್ರೀಮತಿ ಸುಶೀಲಮ್ಮ ದಂಪತಿಯ ತೃತೀಯ ಪುತ್ರರಾದ ಶಶಿಧರ್ 'ಸಮಾಜದ ಒಳಿತಿನಲ್ಲಿಯೇ ನಮ್ಮ ಶ್ರೇಯಸ್ಸು ಅಡಗಿದೆ' ಎಂಬ ನಂಬಿಕೆಯುಳ್ಳವರು.

ರಾಷ್ಟ್ರಕವಿ ಕುವೆಂಪು ಅವರ ಮಾತಿನಂತೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಪೂಜ್ಯರ ಸೇವಾ ಕಾರ್ಯಗಳಿಂದ ಸ್ಫೂರ್ತಿ ಪಡೆದ **ಶಶಿಧರ್ ಗೆ 'ಮುಂದೆ ಗುರಿ, ಹಿಂದೆ ಗುರು, ನಡುವೆ ಸಾಗಿತ್ತು ವೀರರ ದಂಡು'** ಎಂಬಂತೆ ಸಮಾಜ ಸೇವೆಯಲ್ಲಿ ನೈಜ ಕಳಕಳಿಯುಳ್ಳವರು.

ಶಿವಸೈನ್ಯವನ್ನು ಸಂಘಟಿಸಲು ಯುವಕರಿಗೆ ಸ್ಫೂರ್ತಿ ತುಂಬಿ, ಪ್ರೇರಣೆ, ಪ್ರೋತ್ಸಾಹ ನೀಡಿ, ಬೆಂಬಲವಾಗಿ ನಿಂತಿದ್ದ ದಿ|| ಮುದೇಗೌಡರ ಪರಮೇಶ್ವರಪ್ಪ ಅವರನ್ನು ಶಶಿಧರ್ ಸದಾ ಸ್ಮರಿಸುತ್ತಾರೆ. ಹಾಗೆಯೇ ದಿ|| ಕಲ್ಪನಹಳ್ಳಿ ಕೊಟ್ರೇಶಪ್ಪ, ಸಮಾಜದ ಅಧ್ಯಕ್ಷರಾದ ಕೆ.ಆರ್. ಜಯದೇವಪ್ಪ, ಹಾಲುವರ್ತಿ ಮಹೇಶ್ವರಪ್ಪ ಮತ್ತು ಸಮಾಜದ ಹಿರಿಯರು ನೀಡುತ್ತಿದ್ದ ಮಾರ್ಗದರ್ಶನಕ್ಕೆ ಕೃತಜ್ಞರಾಗಿದ್ದಾರೆ. ಸ್ಪಷ್ಟ ಗುರು, ಗುರಿ ಹೊಂದಿರುವ ಶಶಿಧರ್‌ಗೆ ಎಲ್ಲಾ ಒಳಿತಾಗಲಿ ಎಂದು ಆಶಿಸೋಣ.

**- ನಾಗರಾಜ ಸಿರಿಗೆರೆ**

Advt.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬಂಗ್ಲೆ ಮನೆ ಸೈಟು ಮಾರಾಟಕ್ಕೆ**
ಆಂಜನೇಯ ಬಡಾವಣೆ, ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ
ಸೈಟು : 50x80, 70x50, 70x70, 60x40, 50x100. ಮನೆ : 80x100, 50x100, 90x100, 60x60, 40x60 (Duplex)
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಬಂಗ್ಲೆ ಮನೆ ಲೀಸ್ ಗೆ ಇದೆ)

**ಸೈಟ್‌ಗಳು ಮಾರಾಟಕ್ಕೆ**
1)15×50 ಪಶ್ಚಿಮ, ಪಿ.ಜೆ. Extn., ಚರ್ಚ್ ಸ್ಕೂಲ್ ಹತ್ತಿರ.
2)40×59 ಉತ್ತರ, ಶಾಮನೂರು Doller's colony.
ಕಿರಣ್ ಬೂಸನೂರ್ (ಏಜೆಂಟ್)
97315 63409

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**State Bank of India 'ಜನ್‌ಧನ್ ಖಾತೆ'** ಮಾಡಲಾಗುತ್ತದೆ
(10 ವರ್ಷ ಮೇಲಿನವರಿಗೆ)
ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ. ಕರಿಯಪ್ಪನವರ ಜ್ಞಾಪಕಾರ್ಥವಾಗಿ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಭದ್ರಾ ನ್ಯಾಚುರಲ್ಸ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್, ಮೆಡ್ ಪ್ಲಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್ ಆರ್ಯುವೇದಿಕ್ ಔಷಧಿಗಳು, ಸಾವಯವ, ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ ದೊರೆಯುತ್ತವೆ.
ಮೆಳ್ಳೇಕಟ್ಟೆ ಬಸವರಾಜ್ B.Sc (Agri)
94483 23796, 91646 76826

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**Wanted Dealers**
ANU Solar Pvt Ltd
P.J. Extn, Davanagere.
Contact
99645 11172
99649 68999

**WANTED**
Tally Experience with 2-3 years Boys only
S.K. Trading Company
Chowkipete, Davangere.
Exclusive Salary
89041 33227

**S.P. Enterprises**
Solar water heater, Chimney, UPS, Battery, Solar Roof ,Top Water Purifier, Sales & Service.
Exchange Any Brand. DVG
Mo: 63642 27321
99646 13790

**Hombal.in**
ಮನೆ ಬಾಗಿಲಿಗೆ ದಿನಸಿ ಸರಬರಾಜು ಮಾಡಲಾಗುತ್ತದೆ. ದರ, ಗುಣಮಟ್ಟ, ಡೆಲಿವರಿ ಖಚಿತಪಡಿಸಿಕೊಳ್ಳಿ. ಆರ್ಡರ್ ಮಾಡಿ ರೂ. 500/- ಬೆಲೆ ಬಾಳುವ ಉಡುಗೊರೆ ಪಡೆಯಿರಿ.
WhatsApp : 99589 38939
Delivery Free

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಹೋಟೆಲ್ ಅಯೋಧ್ಯಾ**
ದೊಡ್ಡಪೇಟೆ, ದಾವಣಗೆರೆ.
ತಿಂಡಿ, ಊಟ ಪಾರ್ಸೆಲ್‌ಗೆ ಸಂಪರ್ಕಿಸಿ
99160 62963
99801 70600

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**14ನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಜಯಂತಿದೇವಿ ಎಲ್.ಕೆ.**
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
**ಪತಿ : ಲಿಂಗಂಪಲ್ಲಿ ಕೃಷ್ಣಮೂರ್ತಿ ಮತ್ತು ಕುಟುಂಬ**

**ಶ್ರೀಮತಿ ಗಂಗಮ್ಮ ನಿಧನ**



ದಾವಣಗೆರೆ ಡಿಸಿಎಂ ಟೌನ್‌ಶಿಪ್ 1ನೇ ಮೇನ್, 1ನೇ ಕ್ರಾಸ್ ವಾಸಿ ದಿ|| ಟಿ.ಹೆಚ್. ಕೊಟ್ರಪ್ಪ ಅವರ ಪತ್ನಿ, ವಕೀಲರಾದ ಟಿ.ಹೆಚ್. ಚಂದ್ರಶೇಖರ್ ಅವರ ತಾಯಿ ಶ್ರೀಮತಿ ಗಂಗಮ್ಮ (70) ಅವರು ದಿನಾಂಕ 29.4.2021ರ ಗುರುವಾರ ರಾತ್ರಿ 7 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.4.2021ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

**ಮಂಜುನಾಥ್ ನವಲೆ ನಿಧನ**



ದಾವಣಗೆರೆ ಚಾಮರಾಜಪೇಟೆ ಹಾಸಬಾವಿ ಸರ್ಕಲ್ ಹತ್ತಿರದ ವಾಸಿ ಹ.ಭ.ಪ ರಾಮ ಕೃಷ್ಣ ರಾವ್ ನವಲೆ ಇವರ ದ್ವಿತೀಯ ಪುತ್ರ ಅವರು ದಿನಾಂಕ 29.04.2021ರ ಗುರುವಾರ ಸಂಜೆ 4.30ಕ್ಕೆ ನಿಧನರಾದರು. ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.04.2021 ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

**SBI Life Insurance ಗೆ**
SSLC/PUC ಓದಿರುವ ಪುರುಷರು/ ಮಹಿಳೆಯರು ಪಾರ್ಟ್ ಟೈಮ್ ಕೆಲಸ ಮಾಡಿ ತಿಂಗಳಿಗೆ 25,000/- ಆದಾಯ ಗಳಿಸ ಬಹುದು
99009 19091

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826



**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**


**ಎಂಟನೇ ವರ್ಷದ ಪುಣ್ಯಸ್ಮರಣೆ**



**ಸೋಮಶೇಖರ್ ಬಿ. ಪಾಟೀಲ್**
ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಅಜಯ್ ಬಿ. ಪಾಟೀಲ್ ಮತ್ತು ಕುಟುಂಬ ವರ್ಗದವರು**
**ಪಾಟೀಲ್ ವಂಶಸ್ಥರು**
**ಎಂ.ಎಂ. ಫಾರ್ಮಾಟೆಕ್, ದಾವಣಗೆರೆ.**

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||



**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**
ದಾವಣಗೆರೆ ಪಿ.ಜೆ. ಬಡಾವಣೆ, ಡಾ|| ಎಂ.ಸಿ. ಮೋದಿ ರಸ್ತೆ ವಾಸಿ
ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ, ಶ್ರೀ ವಾಗೀಶ್ ಕಟಗಿಹಳ್ಳಿಮಠ, ವಕೀಲರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 27-4-2021ನೇ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ನನ್ನ ಪೂಜ್ಯ ಮಾವನವರಾದ
**ಶ್ರೀ ಸಿದ್ದರಾಮಯ್ಯ ಎಸ್. ಹನಗೋಡಿಮಠ**
ಇವರು ಲಿಂಗೈಕ್ಯರಾದ ಪ್ರಯುಕ್ತ ತತ್ಸಂಬಂಧ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ 01.05.2021ನೇ ಶನಿವಾರ ಬೆಳಿಗ್ಗೆ 11.30 ಕ್ಕೆ ದಾವಣಗೆರೆ ಪಿ.ಜೆ. ಬಡಾವಣೆ, # 459/1, ಡಾ|| ಎಂ.ಸಿ. ಮೋದಿ ರಸ್ತೆ ಮೃತರ ಮಗಳ ಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ, ಶ್ರೀ ವಾಗೀಶ ಕಟಗಿಹಳ್ಳಿಮಠ, ಚಿ|| ಸೋಹನ್ ವಿ. ಕಟಗಿಹಳ್ಳಿಮಠ, ಚಿ|| ಧವನ್ ವಿ. ಕಟಗಿಹಳ್ಳಿಮಠ ಹಾಗೂ ಬಂಧು-ಮಿತ್ರರು. ಮೊ. : 9844015114, 8310073553


## ಜೈಲು ಹಕ್ಕಿಗಳ ರಕ್ಷಣೆಯೇ ಸವಾಲು

**(1ನೇ ಪುಟದಿಂದ)** ಲಭ್ಯವಾಗಿವೆ. ಉಳಿದ 32 ಜನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಪ್ರತಿ ಮೂರು ಗಂಟೆಗಳಿಗೊಮ್ಮೆ ಪಾಳಿ ಪದ್ಧತಿಯಂತೆ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. ಖೈದಿಗಳಿಗೆ ಕೋವಿಡ್ ಸೋಂಕು ತಾಕದಂತೆ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡಿದ್ದೇವೆ.

ಬಾಡಿಗೆ ಮನೆಯಲ್ಲಿನ ಸಿಬ್ಬಂದಿಗಳು ಕರ್ತವ್ಯಕ್ಕಾಗಿ ಹೊರಗಡೆಯಿಂದ ಕಾರಾಗೃಹಕ್ಕೆ ಬರುವ ಕಾರಣ ತುಸು ಆತಂಕಕ್ಕೆ ಕಾರಣವಾಗಿದೆ. ಕಾರಾಗೃಹದ ಸಮೀಪದಲ್ಲೇ ವಸತಿ ಗೃಹಗಳು ಇದ್ದರೆ ತುರ್ತು ಸೇವೆಗಳಿಗೆ ಅನುಕೂಲ ಆಗುವ ಜೊತೆಗೆ ಕೊರೊನಾ ಆತಂಕವೂ ಇಲ್ಲದಂತಾಗುತ್ತಿತ್ತು ಎಂದರು.

ಸಾಮಾನ್ಯವಾಗಿ ಕಾರಾಗೃಹಗಳು ನಗರ ಪ್ರದೇಶದಿಂದ ಹೊರ ಭಾಗದಲ್ಲಿ ಇರುತ್ತವೆ. ಆದರೆ ಜಿಲ್ಲಾ ಕಾರಾಗೃಹ ನಗರ ಮಧ್ಯದಲ್ಲಿದೆ. ಇದು ಮತ್ತಷ್ಟು ಆತಂಕ ಸೃಷ್ಟಿಸಿದೆ. ಇದರ ಮಧ್ಯೆ ವಾಹನಗಳ ನಿಲುಗಡೆಗೂ ಸಮಸ್ಯೆ ಆಗಿದೆ ಎನ್ನುತ್ತಾರೆ ಕರ್ಣ ಅವರು.

**ಕರ್ತವ್ಯ ನಿರತ ವೈದ್ಯರು ಅವಶ್ಯ:** ಕಾರಾಗೃಹದಲ್ಲಿನ ವಿಚಾರಣಾಧೀನ ಖೈದಿಗಳ ಆರೋಗ್ಯ ವಿಚಾರಿಸಲು ಕರ್ತವ್ಯ ನಿರತರಾಗಿ ಸೇವೆ ಸಲ್ಲಿಸುವ ವೈದ್ಯರ ಅಗತ್ಯವಿದೆ. ಸದ್ಯಕ್ಕೆ ಜಿಲ್ಲಾಸ್ಪತ್ರೆಯ ವೈದ್ಯರು ವಾರಕ್ಕೊಮ್ಮೆ ಇಲ್ಲಿಗೆ ಭೇಟಿ ನೀಡಿ ಹೋಗುತ್ತಾರೆ. ಇದೀಗ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವೈದ್ಯರು ಜಿಲ್ಲಾಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಲು ಸಮಯ ಸಾಕಾಗದೇ ಕಾರಾಗೃಹಕ್ಕೆ ಭೇಟಿ ನೀಡುತ್ತಿಲ್ಲ. ನಾವುಗಳೇ ಯಾವುದೇ ಸಣ್ಣಪುಟ್ಟ ಕಾಯಿಲೆಗಳಿಗೂ ಖೈದಿಗಳನ್ನು ಜಿಲ್ಲಾಸ್ಪತ್ರೆಗೆ ಕಳುಹಿಸುತ್ತಿದ್ದೇವೆ ಎಂದರು.

**ದೂರವಾಣಿ, ವಿಡಿಯೋ ಕಾಲ್ ಮುಖೇನ ಸಂಪರ್ಕಾವಕಾಶ:** ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಖೈದಿಗಳ ಸಂಬಂಧಿಕರು ನೇರವಾಗಿ ಭೇಟಿಗೆ ಅವಕಾಶ ಕಲ್ಪಿಸಿಲ್ಲ. ಕೆಲ ಖೈದಿಗಳ ಮಾನಸಿಕ ಸ್ಥೈರ್ಯ ಹೆಚ್ಚಿಸಲು ಸಂಬಂಧಿಕರ ಭೇಟಿಗೆ ಅವಕಾಶ ಕಲ್ಪಿಸಲಾಗಿದೆ. ಇನ್ನುಳಿದಂತೆ ವಾರದಲ್ಲಿ ಒಂದು ಬಾರಿ ದೂರವಾಣಿ ಅಥವಾ ವಿಡಿಯೋ ಕಾಲ್ ಮುಖಾಂತರ ಸಂಪರ್ಕದ ಅವಕಾಶ ನೀಡಲಾಗಿದೆ. ಇದಲ್ಲದೇ ವಿಚಾರಣೆ ಸಂದರ್ಭದಲ್ಲೂ ನ್ಯಾಯಾಲಯಕ್ಕೆ ಹಾಜರುಪಡಿಸದೇ ನ್ಯಾಯಾಧೀಶರ ಸೂಚನೆ ಮೇರೆಗೆ ವಿಡಿಯೋ ಕಾಲ್ ಮುಖಾಂತರವೇ ವಿಚಾರಣೆ ನಡೆಸಲಾಗುತ್ತಿದೆ ಎಂದರು.

**ವಿಚಾರಣಾಧೀನ ಖೈದಿಗಳ ಭೇಟಿಗಾಗಿ ಒತ್ತಡ:** ಕಾರಾಗೃಹದಲ್ಲಿನ ವಿಚಾರಣಾಧೀನ ಖೈದಿಗಳ ಭೇಟಿಗೆ ಕೊರೋನಾ ಹಿನ್ನೆಲೆಯಲ್ಲಿ ನಿಷೇಧ ಇದ್ದರೂ ಸಹ ಅವರನ್ನು ಭೇಟಿ ಆಗಲೇ ಬೇಕು ಎನ್ನುವ ಹಠದಿಂದಾಗಿ ಕೆಲವು ಸಂಬಂಧಿಕರು ಕೆಲ ಗಣ್ಯ ವ್ಯಕ್ತಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಂದ ಒತ್ತಡ ಹಾಕುತ್ತಿದ್ದ ಸನ್ನಿವೇಶಗಳು ಮಾಹಿತಿ ಪಡೆಯುವ ಸಂದರ್ಭದಲ್ಲಿ ಕಾಣ ಸಿಕ್ಕವು.

## ಕೆರೆ ಕಾಮಗಾರಿಗೆ ತಡೆಯಾಜ್ಞೆ

**(1ನೇ ಪುಟದಿಂದ)** ಎಂದಿದ್ದಾರೆ. ಕುಂದುವಾಡ ಕೆರೆಯು ಒಂದು ಕೆರೆಯಲ್ಲ, ಇದು ಕೇವಲ ನೀರು ಸಂಗ್ರಹಿಸುವ ಟ್ಯಾಂಕ್ ಎಂದು ಹೇಳಿ, ಪರಿಸರ ಪರಿಣಾಮದ ಸಮೀಕ್ಷೆ ನಡೆಸದೇ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ತನಿಖೆಯಾಗಬೇಕು ಎಂದು ಸುರ್ವೆ ತಿಳಿಸಿದ್ದಾರೆ.

ನ್ಯಾಯಾಲಯದ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಕೆರೆ ಸುತ್ತಲಿನ 30 ಮೀಟರ್ ವ್ಯಾಪ್ತಿಯ ಬಫರ್ ಜೋನ್, ಮಳೆ ನೀರು ಹಾಗೂ ಚರಂಡಿ ಸೇರಿ ಎಲ್ಲಾ ಕಾಮಗಾರಿಗಳನ್ನು ನಿಲ್ಲಿಸುವಂತೆ ಜಿಲ್ಲಾಧಿಕಾರಿ ಹಾಗೂ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಗಿದೆ ಎಂದವರು ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಪರಿಸರ ಪ್ರೇಮಿ ಡಾ. ಎಸ್. ಶಿಶುಪಾಲ, ಕುಂದುವಾಡ ಕೆರೆಯ ಅಭಿವೃದ್ಧಿ ಕಾರ್ಯಗಳು ಅವೈಜ್ಞಾನಿಕ ಹಾಗೂ ಪರಿಸರ ವಿರೋಧಿ ಎಂದು ಮನಗಂಡು ಕಾಮಗಾರಿಗಳಿಗೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ. ಜೀವವೈವಿಧ್ಯ ನಾಶ ಮಾಡಿದ್ದರೂ ದಾವಣಗೆರೆ ಪರಿಸರ ಉಳಿಸುವ ಹೋರಾಟದಲ್ಲಿ ನ್ಯಾಯದ ಬೆಳಕು ಕಾಣಿಸುತ್ತಿದೆ ಎಂದಿದ್ದಾರೆ.


**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
**ಪಂಡಿತ್ ಚಂದ್ರಶೇಖರ್ ಗುರೂಜಿ**
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
ಮೊ: 99800 57857

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861


## ಕೇರಳದಲ್ಲಿ ಎಡ

**(1ನೇ ಪುಟದಿಂದ)** 128-138 ಸ್ಥಾನ ಪಡೆಯಲಿದೆ. ಟೈಮ್ಸ್ ನೌ - ಸಿ ವೋಟರ್ ಸಮೀಕ್ಷೆ ಪ್ರಕಾರ ತೃಣಮೂಲ ಕಾಂಗ್ರೆಸ್ 162 ಹಾಗೂ ಬಿಜೆಪಿ 115 ಸ್ಥಾನಗಳನ್ನು ಪಡೆಯಲಿದೆ. ಇಂಡಿಯಾ ಟುಡೇ - ಆಕ್ಸಿಸನ್ ಮೈ ಇಂಡಿಯಾ ಸಮೀಕ್ಷೆಯ ಪ್ರಕಾರ 126 ಸೀಟುಗಳ ಅಸ್ಸಾಂನಲ್ಲಿ ಬಿಜೆಪಿ 75-85 ಸ್ಥಾನ ಪಡೆಯಲಿದೆ. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 40-50 ಸ್ಥಾನ ಪಡೆಯಲಿದೆ. ಟುಡೇಯ್ಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಬಿಜೆಪಿ 70, ಕಾಂಗ್ರೆಸ್ 56 ಸ್ಥಾನ ಪಡೆಯಲಿದೆ.

## ಗ್ರಾ. ಪಂ. ಹೊಣೆಗೆ

**(1ನೇ ಪುಟದಿಂದ)** ನಗರ, ಪಟ್ಟಣಗಳ ಪ್ರಮುಖ ಮಾರುಕಟ್ಟೆ, ರಸ್ತೆಗಳು, ಕಟ್ಟಡಗಳು, ಉದ್ಯಾನವನಗಳು ಸೇರಿ ಪ್ರಮುಖ ಕೇಂದ್ರಗಳಲ್ಲಿ ಸ್ಯಾನಿಟೈಸರ್ ನಡೆಯಲಿದೆ. ಕಾನೂನಿನ ನಿರ್ಬಂಧಗಳನ್ನು ಬಿಗಿಗೊಳಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಇದಕ್ಕಾಗಿ 800 ರಿಂದ 1000 ಮಂದಿ ಗೃಹ ರಕ್ಷಕ ದಳವನ್ನು ನೇಮಿಸಿಕೊಳ್ಳುವಂತೆ ಇಲಾಖೆಗೆ ಸೂಚಿಸಲಾಗಿದೆ ಎಂದರು.

# ಕೋವಿಡ್ ಕೇರ್ ಸೆಂಟರ್‌ಗೆ ನೋಡಲ್ ಅಧಿಕಾರಿ ಭೇಟಿ




ಹರಿಹರ, ಏ.29- ನಗರದ ಹೊರವಲಯದಲ್ಲಿರುವ ಕೋವಿಡ್ ಕೇರ್ ಸೆಂಟರ್‌ನಲ್ಲಿ ಕೊರೊನಾ ರೋಗಿಗಳ ಚಿಕಿತ್ಸೆಗೆ ಯಾವುದೇ ತೊಂದರೆ ಬರದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಕೊರೊನಾ ನೋಡಲ್ ಅಧಿಕಾರಿ ಕೌಸರ್ ರೇಷ್ಮಾ ತಿಳಿಸಿದ್ದಾರೆ.

ಅವರು ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರ್‌ಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಬಗ್ಗೆ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪನವರ ಬಳಿ ಮಾಹಿತಿ ಪಡೆದು, ನಂತರದಲ್ಲಿ ಪತ್ರಕರ್ತರ ಜೊತೆ ಮಾತನಾಡಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ನಗರದ ಹೊರವಲಯದ ಗುತ್ತೂರು ಬಳಿ ಇರುವ ಕೋವಿಡ್ ಕೇರ್ ಸೆಂಟರನ್ನು ಇಂದಿನಿಂದ ಕಾರ್ಯರೂಪಕ್ಕೆ ತರಲಾಗುತ್ತಿದೆ. ಇಲ್ಲಿ ಕೊರೊನಾ ರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ, ಬೆಳಗ್ಗೆ ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟ, ಶುದ್ಧ ನೀರು ಸೇರಿದಂತೆ ರೋಗಿಗಳಿಗೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಈ ಸಂದರ್ಭದಲ್ಲಿ ಪೌರಾಯುಕ್ತರಾದ ಎಸ್.ಲಕ್ಷ್ಮಿ, ಎಇಇ ಬಿರಾದಾರ್, ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಡಾ. ವಿಶ್ವನಾಥ, ಸಿಡಿಪಿಓ ನಿರ್ಮಲ, ಪ್ರಿಯದರ್ಶಿನಿ ಹಾಗೂ ಇತರರು ಹಾಜರಿದ್ದರು.

# ಮಲೇಬೆನ್ನೂರಿನಲ್ಲಿ ಲಸಿಕೆಗೆ ಪರದಾಟ

ಮಲೇಬೆನ್ನೂರು, ಏ.29 - ಪಟ್ಟಣದ ಭೋವಿ ಕಾಲೋನಿಯಲ್ಲಿ ಬುಧವಾರ 36 ವರ್ಷದ ವ್ಯಕ್ತಿಯೊಬ್ಬರಿಗೆ ಕೊರೊನಾ ಪಾಸಿಟಿವ್ ಬಂದಿರುವ ಹಿನ್ನೆಲೆಯಲ್ಲಿ ಗುರುವಾರ ಆ ವ್ಯಕ್ತಿಯ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ಟೆಸ್ಟ್‌ಗೆ ಒಳಪಡಿಸಲಾಯಿತು.

ಈ ಸಂದರ್ಭದಲ್ಲಿ ಹಾಜರಿದ್ದ ಉಪ ತಹಶೀಲ್ದಾರ್ ಆರ್.ರವಿ, ಪುರಸಭೆ ಮುಖ್ಯಾಧಿಕಾರಿ ದಿನಕರ್, ಗ್ರಾ.ಪಂ ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪುರಸಭೆ ಅಧಿಕಾರಿಗಳಾದ ಉಮೇಶ್, ಪ್ರಭು ಮತ್ತಿತರರಿದ್ದರು.

**ಲಸಿಕೆಗೆ ಪರದಾಟ :** ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರ ಮತ್ತು ಗುರುವಾರ ಕೋವಿಡ್ ಲಸಿಕೆ ಪೂರೈಕೆ ಇಲ್ಲದ ಕಾರಣ ಲಸಿಕೆ ಪಡೆದುಕೊಳ್ಳಲು ಬಂದಿದ್ದ ಜನರು ಪರದಾಡುವಂತಾಯಿತು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಅವರು ಶುಕ್ರವಾರ ಲಸಿಕೆ ಬರುವ ಸಾಧ್ಯತೆ ಇದ್ದು, ಬುಧವಾರ ಮತ್ತು ಗುರುವಾರ ಹೆಸರು ನೋಂದಾಯಿಸಿದವರಿಗೆ ಲಸಿಕೆ ನೀಡಲಾಗುವುದು ಎಂದರು.

# ಕೋಟಿ ಲಸಿಕೆ ಖರೀದಿ : ಸಿಎಂ

**(1ನೇ ಪುಟದಿಂದ)** ಡೋಸ್ ಲಭ್ಯವಿದೆ ಎಂದವರು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಹಂತ ಹಂತವಾಗಿ 18-45 ವರ್ಷದವರಿಗೆ ಲಸಿಕೆ ಹಾಕುವ ಅಭಿಯಾನ ನಡೆಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದ್ದಾರೆ. ಮೇ 1ರಿಂದ 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಹಲವು ರಾಜ್ಯಗಳ ಮನವಿಯ ಮೇರೆಗೆ ಲಸಿಕೆ ನೀಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಮುಕ್ತಗೊಳಿಸಿದೆ.

ಈ ನಡುವೆ, ರಾಜ್ಯದಲ್ಲಿ ಗುರುವಾರ ಒಂದೇ ದಿನ 35,024 ಸೋಂಕಿತರು ಕಂಡು ಬಂದಿದ್ದು, 270 ಜನ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲೀಗ 3.49 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಇವರಲ್ಲಿ 2,431 ಜನ ಐ.ಸಿ.ಯು.ನಲ್ಲಿದ್ದಾರೆ. 14,142 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 19,637 ಪ್ರಕರಣಗಳು ಕಂಡು ಬಂದಿದ್ದು, 143 ಜನ ಸಾವನ್ನಪ್ಪಿದ್ದಾರೆ. ನಗರದಲ್ಲೀಗ 2.37 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಮೈಸೂರಿನಲ್ಲಿ 1,219, ದಕ್ಷಿಣ ಕನ್ನಡದಲ್ಲಿ 1,175, ಬೆಂಗಳೂರು ಗ್ರಾಮಾಂತರದಲ್ಲಿ 1,129, ಕಲಬುರಗಿಯಲ್ಲಿ 957 ಸೋಂಕಿತರು ಕಂಡುಬಂದಿದ್ದಾರೆ.

# ಸಿಎಂಗೆ ರೇಣುಕಾಚಾರ್ಯ ಮನವಿ

**(1ನೇ ಪುಟದಿಂದ)** ಉಡುಪಿ ಇನ್ನಿತರೆ ಜಿಲ್ಲೆಗಳಿಗೆ ಸರಬರಾಜು ಮಾಡಲಾಗುತ್ತದೆ. ಅಷ್ಟೇ ಅಲ್ಲದೇ ರಾಜ್ಯಾದ್ಯಂತ ಸಾಕಷ್ಟು ಜನ ರೈತರು ತರಕಾರಿ ಬೆಳೆಯುತ್ತಿದ್ದು ಲಾಕ್‌ಡೌನ್ ಸಮಯದಿಂದ ಅನಾನುಕೂಲ ಉಂಟಾಗಿದೆ ಎಂದು ಸಿಎಂಗೆ ಮನವರಿಕೆ ಮಾಡಿಕೊಟ್ಟರು.

ತರಕಾರಿ ಕಟಾವು ಮಾಡಲು, ಅವುಗಳನ್ನು ಲಾರಿಗಳಿಗೆ ತುಂಬಲು ಕೂಲಿ ಕಾರ್ಮಿಕರು 8 ರಿಂದ 9 ಘಂಟೆಗೆ ಆಗಮಿಸುತ್ತಾರೆ. ಇದರಿಂದಾಗಿ ರೈತರು ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತಂದರೆ ಖರೀದಿದಾರರು ಕಡಿಮೆ ಬೆಲೆಗೆ ತರಕಾರಿಗಳನ್ನು ಖರೀದಿ ಮಾಡುತ್ತಾರೆ. ಇದರಿಂದ ರೈತರಿಗೆ ಅನಾನುಕೂಲ ಉಂಟಾಗುತ್ತಿದೆ ಎಂದರು. ಲಾಕ್‌ಡೌನ್ ಸಮಯದ ಅಭಾವದಿಂದಾಗಿ ರೈತರು ಬೆಳೆದ ತರಕಾರಿಗಳನ್ನು ಸರಿಯಾಗಿ ಸಾಗಿಸಲು ಆಗದೇ, ಸೂಕ್ತ ಬೆಲೆಯೂ ಸಿಗದೇ ತರಕಾರಿ ಬೆಳೆದ ರೈತರು ಕಂಗಾಲಾಗಿ ಹೋಗಿದ್ದಾರೆ. ಮುಖ್ಯಮಂತ್ರಿಗಳು ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಮಯವನ್ನು ಬೆಳಗ್ಗೆ 6 ರಿಂದ ಮಧ್ಯಾಹ್ನ 3 ರವರೆಗೆ ನಿಗದಿ ಮಾಡುವಂತೆ ಕೋರಿದ್ದಾರೆ. ಈ ಸಂದರ್ಭ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಅವರು ರೇಣುಕಾಚಾರ್ಯರಿಗೆ ಸಾಥ್ ನೀಡಿದರು.

## ಓದುಗರ ಪತ್ರ

### 2ನೇ ಡೋಸ್ ಕೊವ್ಯಾಕ್ಸಿನ್ ಲಸಿಕೆ...?

**ಮಾನ್ಯರೇ,**

ಏಪ್ರಿಲ್ 9 ರಂದು ತಮ್ಮ ಪತ್ರಿಕೆಯ ಓದುಗರ ಪತ್ರ ವಿಭಾಗಕ್ಕೆ ಕೊವ್ಯಾಕ್ಸಿನ್ ಅಥವಾ ಕೋವಿಶೀಲ್ಡ್ ಆಯ್ಕೆ ಸಾಧ್ಯವೇ! ಎಂದು ಪತ್ರವನ್ನು ಬರೆದಿದ್ದೆ. ಪತ್ರ ಓದಿದ ಮಿತ್ರರು ನನಗೆ ಫೋನಾಯಿಸಿ... ಹೌದಲ್ಲಾ! ಯಾವ ಲಸಿಕೆಯನ್ನು ನಮಗೆ ಹಾಕಿದ್ರೂ ಎಂಬುದು ಮೊಬೈಲಲ್ಲಿ ಇದೆಯೇ ಹೊರತು ನಮಗೆ ಮಾಹಿತಿ ಇಲ್ಲ. ಹಾಗೆ ಕೆಲವರು ಮೊಬೈಲ್‌ಗೆ ಬಂದ ಮಾಹಿತಿ ಹೇಗೆ ಡೌನ್‌ಲೋಡ್ ಮಾಡಿಕೊಳ್ಳಬೇಕೆಂದು ತಿಳಿಸಿದಾಗ ಅವರು ಖುಷಿ ಪಟ್ಟರು. ಏಪ್ರಿಲ್ 11 ರಿಂದ 14 ರ ವರೆಗೆ ವ್ಯಾಕ್ಸಿನ್ ಉತ್ಸವವೂ ಆಯ್ತು. ಈಗ ಎಲ್ಲೆಲ್ಲೂ ಎರಡನೇ ಮಹಾಮಾರಿಯ ಆರ್ಭಟಕ್ಕೆ ಬೆದರಿದ ಸರ್ಕಾರ 14 ದಿನಗಳ ಲಾಕ್ ಡೌನ್ ಘೋಷಿಸಿದ್ದೂ ಆಯ್ತು... ಜನಸಾಮಾನ್ಯರು ಮೊದಲ ಡೋಸ್ ಲಸಿಕೆಯನ್ನು ಹಾಕಿಸಿಕೊಳ್ಳಲು... ಆಸ್ಪತ್ರೆಗಳಲ್ಲಿ ಜನ ಜಾತ್ರೆಗೆ ಸೇರಿದಂತೆ ಸೇರಿದ್ದಾರೆ. ಹೀಗಾಗಿ ಎಲ್ಲೆಡೆ.... ಲಸಿಕೆ ಖಾಲಿ ಖಾಲಿ... No Stock Board. ಆದರೆ, ಕೊವ್ಯಾಕ್ಸಿನ್ ಮೊದಲ ಡೋಸ್ ಹಾಕಿಸಿಕೊಂಡು 28 ದಿನಗಳಿಂದ 42 ದಿನಗಳಲ್ಲಿ ಹಾಗೂ ಕೋವಿಶೀಲ್ಡ್ ಲಸಿಕೆ 42 ದಿನಗಳಿಂದ 56 ದಿನಗಳಲ್ಲಿ (2-3 ದಿನ ವ್ಯತ್ಯಾಸವಾದರೆ ಸಮಸ್ಯೆ ಆಗದು) ಕಡ್ಡಾಯವಾಗಿ ಹಾಕಿಸಿಕೊಂಡರೆ ಮಾತ್ರ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದು ಹೇಳ್ತಾರೆ.


ನಾನು ಕೊವ್ಯಾಕ್ಸಿನ್ ಲಸಿಕೆ ಹಾಕಿಸಿದ್ದರಿಂದ ಅದು ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರ ಸರಬರಾಜು... ಖಾಸಗಿ ಆಸ್ಪತ್ರೆಯಲ್ಲಿ ಕೇಳಿದರೆ ನಮ್ಮಲ್ಲಿ ಕೋವಿಶೀಲ್ಡ್ ಮಾತ್ರ.. ಸದ್ಯಕ್ಕೆ ಬರಬೇಕು ಮೇ 2ರ ನಂತರ ಬರಬಹುದು.

ಪ್ರತಿದಿನ ಸಿ.ಜಿ. ಜಿಲ್ಲಾ ಆಸ್ಪತ್ರೆಗೆ ಕೊವ್ಯಾಕ್ಸಿನ್ 2ನೆ ಡೋಸ್ ಪಡೆಯಲೆಂದು ನೂರಾರು ಹಿರಿಯ ನಾಗರಿಕರು ಬರಬೇಕೆಂದರೆ..... ಕೊರೊನಾ 2ರ ಅಲೆಯ ಭಯ....

ಈಗ ಕೊವ್ಯಾಕ್ಸಿನ್ ಮೊದಲ ಡೋಸ್ ಪಡೆದು 45-50 ದಿನಗಳಾಗಿ ಎರಡನೆಯ ಡೋಸ್ ಲಭ್ಯವಾಗದೆ ಇದ್ದಲ್ಲಿ ಮೊದಲು ಹಾಕಿದ್ದು ವ್ಯರ್ಥವಾದಂತೆ....ಪುನಃ ಮೊದಲ ಲಸಿಕೆ...ನಂತರ 2ನೇ ಲಸಿಕಾ ಪಡೆಯ ಬೇಕಾಗಬಹುದೇ..? ಎಲ್ಲದಕ್ಕೂ ಪ್ರಶ್ನಾರ್ಥಕ ಚಿಹ್ನೆ ? ಈ ದಿಶೆಯಲ್ಲಿ ಆರೋಗ್ಯ ಇಲಾಖೆಯವರು ಸಿ.ಜಿ. ಜಿಲ್ಲಾ ಆಸ್ಪತ್ರೆಯಲ್ಲಿ ಎರಡನೆಯ ಡೋಸ್ ತರಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು ಸಹಕರಿಸಲಿ ಎಂದು ಪ್ರಾರ್ಥಿಸುವೆ..

**- ರಘುನಾಥರಾವ್ ತಾಪ್ಸೆ,** ನಿವೃತ್ತ ಬ್ಯಾಂಕ್ ಅಧಿಕಾರಿ

# ಹೆಚ್ಚೆನ್ನೆಸ್‌ಗೆ ಅಕ್ಷರ ನಮನ



**'ಜನತಾವಾಣಿ' ಸಂಸ್ಥಾಪಕ ಸಂಪಾದಕರಾಗಿದ್ದ ಹೆಚ್.ಎನ್. ಷಡಾಕ್ಷರಪ್ಪ ಅವರು ನಮ್ಮನ್ನಗಲಿ ಏಪ್ರಿಲ್ 29ಕ್ಕೆ ಹತ್ತು ವರ್ಷಗಳಾದವು. ಪತ್ರಿಕೆಯನ್ನು ಜನಮನದ ಜೀವನಾಡಿಯನ್ನಾಗಿಸಿದ ಕೀರ್ತಿ ಹೆಚ್ಚೆನ್ನೆಸ್ ಅವರದ್ದು. ಪತ್ರಿಕೆ ಬೆಳೆಸುವ ಜೊತೆಗೆ ಅನೇಕ ಓದುಗರ ಪ್ರೀತಿ ಗಳಿಸಿದ್ದರು. ಹೆಚ್ಚೆನ್ನೆಸ್ ಅವರನ್ನು ಕೆಲವು ಓದುಗರು ಈ ಸಂದರ್ಭದಲ್ಲಿ ನೆನಪಿಸಿಕೊಂಡು ತಮ್ಮ ಅಕ್ಷರಗಳ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.**

## ವೈಜ್ಞಾನಿಕ ವಿಚಾರಧಾರೆಯ ಪ್ರತಿಪಾದಕ

ಸುದ್ದಿಯಾಗಲೀ, ಜಾಹೀರಾತಾಗಲಿ 'ಜನತಾವಾಣಿ'ಯಲಿ ಮೊದ್ಲು ಬರ್ಬೇಕು. ಇನ್ನುಳಿದವುಗಳ ವಿಚಾರ ಆಮೇಲೆ ಎಂಬಷ್ಟರ ಮಟ್ಟಿಗೆ ಜನ ಜನಿತವಾಗುವಂತೆ ಪತ್ರಿಕೆಯನ್ನು ಮುಗಿಲೆತ್ತರಕ್ಕೆ ಬೆಳೆಸಿದ ಹೆಚ್.ಎನ್.ಷಡಾಕ್ಷರಪ್ಪನವರು ಭೌತಿಕವಾಗಿ ಇನ್ನಿಲ್ಲವಾಗಿ ಇಂದಿಗೆ (ಏಪ್ರಿಲ್ 29) ವರ್ಷ ಹತ್ತು.

ಜನಮಾನಸದಲ್ಲಿ ಹೆಚ್ಚೆನ್ನೆಸ್ ಎಂದೇ ಗುರುತಿಸಲ್ಪಡುವ ಷಡಾಕ್ಷರಪ್ಪನವರು ಒಬ್ಬ ಒಳ್ಳೆಯ ಪತ್ರಕರ್ತ, ನುರಿತ ವಾಗ್ಮಿ, ವೈಜ್ಞಾನಿಕ ವಿಚಾರಧಾರೆಯ ಪ್ರತಿಪಾದಕ. ಎಲ್ಲಕ್ಕೂ ಮಿಗಿಲಾಗಿ 'ಹಾರಿ ಮೇಲಕೆ, ಗಗನವೇ ನಿಮ್ಮ ಮಿತಿಯಾಗಿರಲಿ' ಎಂದು ಕಿರಿಯರಿಗೆ ಬೆನ್ನು ತಟ್ಟಿ ಉತ್ತೇಜಿಸಿದ ಅಪರೂಪದ ಮಾನವತಾವಾದಿ.

ಷಡಾಕ್ಷರಪ್ಪನವರ ಜೊತೆಯಲ್ಲಿನ ಒಂದೆರಡು ಸಿಹಿ ನೆನಪುಗಳಿವು.

ರಾಜ್ಯ ಜಿಲ್ಲಾ ಮತ್ತು ಸಣ್ಣ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಹೆಚ್ಚೆನ್ನೆಸ್ ರವರಿಗೆ ದಾವಣಗೆರೆಯ ವರ್ತಕರ ಸಂಘದ ಸಭಾಂಗಣದಲ್ಲಿ ಭವ್ಯ ಸತ್ಕಾರ. ಸನ್ಮಾನದ ಮೊದಲು ಅಭಿಮಾನಿಗಳ ಮಾತುಗಳ ಮಹಾಪೂರ. ಅವೆಲ್ಲವನ್ನೂ ವಿನಮ್ರರಾಗಿ ಸ್ವೀಕರಿಸಿದ ಹೆಚ್ಚೆನ್ನೆಸ್ ಭಾಷಣ ಮುಗಿಯುತ್ತ ಬಂದಾಗ ಸಭಿಕರ ಕಡೆಯಿಂದ ಅನಾಮಧೇಯ ಚೀಟಿ. ಚೀಟಿ ಸ್ವೀಕರಿಸಿದ ಹೆಚ್ಚೆನ್ನೆಸ್, ಪೂರ್ಣ ಓದಿ, ಅರೆ ಕ್ಷಣ ತಡೆದರು. 'ಸಂಪಾದಕರ ಸಂಘದ ಬಗೆಗಿನ, ಮೂಲಭೂತ ವಿಚಾರದ ಬಗೆಗಿನ ಈ ಅನಾಮಧೇಯ ಪತ್ರಕ್ಕೆ ಇಲ್ಲಿ ಉತ್ತರಿಸುತ್ತಾ ನಿಂತರೆ ತಾಸುಗಟ್ಟಲೆ ಸಮಯವಾದೀತು, ಪ್ರಶ್ನೆ ಯೋಗ್ಯವಾಗಿದೆ' ತುಸು ತಡೆದು 'ಪ್ರಸಾದ್, ರಾತ್ರಿ ಆಫೀಸ್ ಕಡೆ ಬರ್ತೀರಲ್ಲಾ, ಮಾತಾಡೋಣ' ಎಂದು ಮುಗಿಸಿದರು.

ಬರಹ ನೋಡಿದೊಡನೆ ಇದರ ಕರ್ತೃ ಇವನೇ ಎಂದು ಗುರ್ತಿಸುವ, ಅವನ ಕರ್ತೃತ್ವ ಶಕ್ತಿಗೆ ಪ್ರೋತ್ಸಾಹ ನೀಡುವ ಗುಣ ಅವರಿಗೆ ರಕ್ತಗತವಾಗಿತ್ತೆಂಬುದಕ್ಕೆ ಚೀಟಿ ಕಳುಹಿಸಿದವ ನಾನೇ ಎಂದು ತತ್‌ಕ್ಷಣ ಕಂಡುಕೊಂಡಿದ್ದು - ಇದು ನಿದರ್ಶನ.

ಸುನಂದಾ ರಂಗಮಂಟಪದಲ್ಲಿ ಹಿರಿಯ ಕಲಾವಿದ ಟಿ.ಎನ್.ಬಾಲಕೃಷ್ಣ ರಿಗೆ ಸನ್ಮಾನ. ಹೆಚ್ಚೆನ್ನೆಸ್, ಎಸ್ಸೆಸ್ ಅತಿಥಿಗಳು. ಎಂದಿನಂತೆ ನನ್ನದೇ ಸ್ವಾಗತ, ನಿರೂಪಣೆ, ಇತ್ಯಾದಿ. ಸಮಾರಂಭದ ನಂತರ ಚೇತನಾ ಹೋಟೆಲ್ ಕೊಠಡಿಯಲ್ಲಿ ಬಾಲಕೃಷ್ಣ, ಚಿತ್ರ ನಿರ್ದೇಶಕ ವೈ.ಆರ್. ಸ್ವಾಮಿ ಅವರ ಜೊತೆಯಲ್ಲಿ ಹೆಚ್ಚೆನ್ನೆಸ್ ಮತ್ತು ನನ್ನ ಭೋಜನಾ ನಂತರ ಮಾತುಕತೆ.

ಸುದೀರ್ಘವಾಗಿ ಮಾತನಾಡಿದ ಬಾಲಕೃಷ್ಣರು ಇಂದಿನ ಚಿತ್ರರಂಗದ ಒಳ ರಾಜಕೀಯ, ಅನಿಷ್ಟ ಬೆಳವಣಿಗೆಯ ಬಗ್ಗೆ ಗದ್ಗದ ಕಂಠದಿಂದ ವಿವರಿಸಿದಾಗ ಗಾಬರಿಯಾಗುವ, ಅಯ್ಯೋ ! ಹೀಗೂ ಉಂಟೆ? ಎಂದು ವಿಭ್ರಾಂತನಾಗುವ ಸರದಿ ನನ್ನದು. ಎಲ್ಲವನ್ನೂ ಚಕಚಕನೆ ನೋಟ್ಸ್ ಮಾಡಿಕೊಳ್ಳಲು ಮರೆಯಲಿಲ್ಲ.

ಊಟ ಮುಗಿಯಿತು. ಕೈ ಮುಗಿದು ಹೊರಬಂದೆವು. 'ನೋಟ್ಸ್ ಮಾಡ್ಕೊಂಡ್ರಲ್ಲ, ಮುಂದೇನು ಮಾಡ್ತೀರಿ?' ದಾರಿಯಲ್ಲಿ ಹೆಚ್ಚೆನ್ನೆಸ್ ಪ್ರಶ್ನೆ. 'ಸರ್, ಒಳ್ಳೆ ಸ್ಟೋರಿ ಮಾಡಿ ಭಾನುವಾರದ ಸಂಚಿಕೆಗೆ ಹಾಕ್ತೇನೆ' ಎಂದೆ.

'ಮೊದ್ಲು ಆ ಚೀಟೀನ ಹರ್ದು ಎಸೀರಿ. ಪ್ರಕಟವಾದ್ರೆ ನೀವೂ ಇರೋಲ್ಲಾ, ಅವ್ರೂ ಇರೋಲ್ಲಾ. ನನ್ನ ಅನುಭವದ ಮಾತನ್ನು ಕೇಳಿ' ಅಂದ್ರು ಹೆಚ್ಚೆನ್ನೆಸ್. ಅಷ್ಟೇ ಮಾಡ್ದೆ. ಕಿರಿಯ ಬರಹಗಾರರ ಹಿತದ ಬಗ್ಗೆ ಹೆಚ್ಚೆನ್ನೆಸ್ ತೋರುತ್ತಿದ್ದ ಕಾಳಜಿಗೆ ಇದೊಂದು ನಿದರ್ಶನ.

ರೈಲು ಉದ್ಯೋಗಕ್ಕೆ ಸೇರಿದ ಮೇಲೊಮ್ಮೆ ಹೆಚ್ಚೆನ್ನೆಸ್ ರೈಲು ಹತ್ತಲು ದಾವಣಗೆರೆ ರೈಲ್ವೆ ನಿಲ್ದಾಣಕ್ಕೆ ಬಂದರು. ಅಲ್ಲಿದ್ದ ವೇಳಾಪಟ್ಟಿಯಲ್ಲಿರುವ ರೈಲುಗಳ ಸಂಖ್ಯೆ ನೋಡಿ ಆಶ್ಚರ್ಯಪಟ್ಟ ಅವರು ನಮ್ಮೂರಿಗೆ ಇಷ್ಟೊಂದು ರೈಲು ಬರುತ್ತೆ ಅಂಥ ನನಗೆ ಗೊತ್ತಿರ್ಲಿಲ್ಲ. ಇದನ್ನು ಬರೆದು ಕೊಡಿ ಹಾಕೋಣ. ಜನಗಳಿಗೆ ಅನುಕೂಲವಾಗುತ್ತೆ ಅಂದ್ರು. ಜೊತೆಗೆ ಬಂದಿದ್ದ ಮಂಜುನಾಥ ಏಕಬೋಟೆಯವರ ಕೈಗೆ ಪ್ರತಿ ಮಾಡಿ ಕೊಟ್ಟೆ. ಅಭ್ಯಾಸ ಬಲದಂತೆ ಕೆಳಗೆ ಸಹಿ ಹಾಕಿದ್ದೆ. ಮರುದಿನವೇ ರೈಲ್ವೆ ವೇಳಾಪಟ್ಟಿ ಪ್ರಕಟಗೊಂಡಿತು, ಲೇಖಕ (?)ರ ಹೆಸರಿನ ಸಹಿತ !

ಮಾರನೇ ದಿನ ನಿಲ್ದಾಣಕ್ಕೇ ಬಂದು ಮಾತನಾಡಿಸಿದ ಹಿರಿಯ ಸಹಕಾರಿ ಧುರೀಣರಾಗಿದ್ದ ಅಂದನೂರು ಕೊಟ್ರಬಸಪ್ಪನವರು 'ನೋಡಪ್ಪಾ, ನಾನು ವೇಳಾಪಟ್ಟಿಯನ್ನು ಕತ್ತರಿಸಿ ನನ್ನ ಬೆಡ್ ರೂಂನಲ್ಲಿ ಹಾಕಿದ್ದೇನೆ. ಇವು ಜನರಿಗೆ ಉಪಯೋಗ ಆಗ್ತಾವೆ. ಅದ್ ಬಿಟ್ಟು ಏನೇನೋ ಹಾಕಿ ಪೇಜ್ ತುಂಬ್ಸಿದ್ರೆ ಏನ್ ಸುಖ? ಇದನ್ನೇ ನಾನು ಷಡಕಣ್ಣನಿಗೂ ಹೇಳ್ದೆ' ಎಂದು ಶಹಬ್ಬಾಶ್‌ಗಿರಿ ಕೊಟ್ಟರು !

ಹೆಚ್ಚೆನ್ನೆಸ್ ಗೆ ಹೇಳಿದಾಗ 'ಇಷ್ಟು ವರ್ಷದ ಮೇಲೆ ಹೀಗಾದ್ರೂ ಜನ ಗುರ್ತಿಸಿದ್ರಲ್ಲ ಅಂತಾ ಸಂತೋಷ ಪಡಿ ವೇಳಾಪಟ್ಟಿ ಸಾಹಿತಿಗಳೇ' ಎಂದು ರೇಗಿಸುವುದನ್ನು ಬಿಡಲಿಲ್ಲ.

ಆ ದಿನಗಳಲ್ಲಿ ಕಾರ್ಯಕ್ರಮ ನಿರೂಪಣೆ ಮಾಡುವ ದೊಡ್ಡ ಖಯ್ಯಾಲಿ ನನಗೆ. ಅದಕ್ಕೆ ತಕ್ಕಂತೆ ರೈಲು ಹತ್ತಿಸುತ್ತಿದ್ದ ಮಿತ್ರ ಬಳಗ. ಕೈಗೆ ಸಿಗುತ್ತಿದ್ದ ಕಾರ್ಯಕ್ರಮಗಳು.

ಹೀಗೆ ಒಂದು ಕಾರ್ಯಕ್ರಮ. ಹೆಚ್ಚೆನ್ನೆಸ್ ಅಧ್ಯಕ್ಷತೆ. ಇನ್ನೂ ನಾಲ್ಕಾರು ಜನ ಅತಿಥಿಗಳು. ಕಾರ್ಯಕ್ರಮ ಆರಂಭಿಸಿದೆ. ಇದ್ದ ಅತಿಥಿಗಳನ್ನು ಬಾಯಿಗೆ ಬಂದ ಶಬ್ದಭಂಡಾರದಿಂದ ಹಾಡಿ ಹೊಗಳಿದೆ. ಅದ್ಭುತ ಮುಕ್ತಾಯವೂ ಆಯಿತು.

'ಪ್ರಸಾದ್, ನನ್ನ ಕಾರಿನಲ್ಲೇ ಬನ್ನಿ' ಅಂದ್ರು ಹೆಚ್ಚೆನ್ನೆಸ್. ಆಫೀಸಿಗೆ ಕರೆದೊಯ್ದರು. ಚಹಾ ನಂತರ 'ಒಂದು ಮಾತು ಹೇಳಿದ್ರೆ, ಬೇಜಾರು ಇಲ್ಲಾ ತಾನೇ' ಅಂದ್ರು. 'ಛೆ ! ಛೆ !! ಇಲ್ಲ, ಹೇಳಿ ಸರ್' ಅಂದೆ.

'ನೀವು ಕಾರ್ಯಕ್ರಮ ಚೆನ್ನಾಗಿ ನಿರೂಪಣೆ ಮಾಡ್ತೀರಿ, ಒಳ್ಳೆಯ ಶಬ್ದ ಭಂಡಾರವಿದೆ. ಸಂತೋಷ. ಆದರೆ ಆ ಹೊಗಳಿಕೆಗಳು ಸತ್ಪಾತ್ರರಿಗೆ ಸಂದಾಗ ಆ ಮಾತುಗಾರಿಕೆಗೂ ಒಂದು ಬೆಲೆ ಬರುತ್ತದೆ. ಅದ್ಬಿಟ್ಟು ಅಪಾತ್ರದಾನವಾದ್ರೆ ನಗೆಪಾಟಲಿಗೀಡಾಗ್ತೀರಿ. ಯಾವ್ಯಾವ್ದೋ ಕಾರಣಗಳಿಗಾಗಿ ವ್ಯವಸ್ಥಾಪಕರು ಅನಿವಾರ್ಯವಾಗಿ ಸಮಾಜದಲ್ಲಿ ಒಳ್ಳೆಯ ಹೆಸರನ್ನು ಕಳೆದುಕೊಂಡವರನ್ನೂ ಕರೆದಿರಬಹುದು. ಅದರಿಂದ ಅವರಿಗುಪಯೋಗವೂ ಆಗಬಹುದು. ಆದರೆ ಇದಾವುದರ ಅರಿವಿಲ್ಲದ ಭೋಳೆ ಸ್ವಭಾವದ ನೀವು ಅವರುಗಳನ್ನು ಇಂದ್ರ, ಚಂದ್ರ, ದೇವೇಂದ್ರ ಎಂದು ಹಾಡಿ ಹೊಗಳಿ ಅಟ್ಟಕ್ಕೇರಿಸಿದರೆ, ಜನ ಅವರ ಚಾರಿತ್ರ್ಯದ ಅಳತೆಗೋಲಿನಲ್ಲಿ ನಿಮ್ಮನ್ನು ಅಳೆಯುತ್ತಾರೆ.'

ಅಂದಿನಿಂದ ನಿರೂಪಣೆಗೆ ಕೈ ಮುಗಿದೆ.

ಒಂದು ಸಂಜೆ ಮಿತ್ರ ಹೆಚ್.ಆಂಜನೇಯ ಫೋನ್ ಮಾಡಿ, 'ಎಂಟು ಗಂಟೆಗೆ ಬರ್ತೇನೆ, ರೆಡಿ ಇರಿ. ಆಸ್ಪತ್ರೆಗೆ ಹೋಗಬೇಕು. ಹೆಚ್ಚೆನ್ನೆಸ್‌ಗೆ ಆರೋಗ್ಯ ಸರಿಯಿಲ್ಲವಂತೆ' ಎಂಬ ಆಘಾತಕಾರಿ ವಿಚಾರ ತಿಳಿಸಿದ್ರು.

ಆದರಂದು ಹಾವೇರಿಯಲ್ಲಿ ರಾತ್ರಿ ಪಾಳಿ ಕರ್ತವ್ಯದಲ್ಲಿದ್ದ ನಾನು ಹೊರಡುವಂತಿರಲಿಲ್ಲ, ಬಿಡುವಂತಿರಲಿಲ್ಲ. 'ಈಗ ಬೇಡ. ಬೆಳಗ್ಗೆ ಎಂಟಕ್ಕೆ ಬನ್ನಿ, ರೆಡಿ ಇರ್ತೇನೆ' ಎಂದು ಬಲವಂತವಾಗಿ ಒಪ್ಪಿಸಿದೆ.

ಮುಂಜಾನೆ ಹಾವೇರಿಯಿಂದ ಹೊರಡುವಾಗಲೇ ಆಂಜನೇಯರ ಕೋಪಾವಿಷ್ಟ ಮಾತುಗಳು ಫೋನಿನಲ್ಲಿ ತೂರಿಬಂದವು 'ನಿಮ್ಮಿಂದಾಗಿ ನಾನೂ ಹೋಗಲಿಲ್ಲ, ಹೆಚ್ಚೆನ್ನೆಸ್ ಇನ್ನಿಲ್ಲ'

ಯುಗವೊಂದು ಅಂತ್ಯವಾಯಿತು !

**- ಹಳೇಬೀಡು ರಾಮ ಪ್ರಸಾದ್**

## ಎಲ್ಲರಲ್ಲಿಯೂ ಗೌರವದ ಭಾವನೆ ಬಿತ್ತಿದ ನಮ್ಮ ಷಡಾಕ್ಷರಪ್ಪನವರು

ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ 90ರ ದಶಕದಲ್ಲಿ ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದವರಲ್ಲಿ ಹೆಚ್.ಎನ್. ಷಡಾಕ್ಷರಪ್ಪನವರು ಕೂಡ ಒಬ್ಬರು. ಒಂದು ಪತ್ರಿಕೆಯ ಸಂಪಾದಕರಾಗಿ ಅವರು ಪತ್ರಿಕೆಗೆ ಮಾತ್ರ ಸೀಮಿತವಾಗದೆ, ಒಂದು ಪತ್ರಿಕೆ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಯಾವ ರೀತಿ ಬಿತ್ತಬಹುದು ಎಂಬುದಕ್ಕೆ ಸಾಕ್ಷಿಯಾಗಿ ನಿಂತರು.

1989 ರಿಂದ 1994 ರವರೆಗೆ ನಾನು ಚಳ್ಳಕೆರೆ ತಾಲ್ಲೂಕಿನ ದೊಡ್ಡ ಉಳ್ಳಾರ್ತಿ ಫಾರ್ಮ್‌ನಲ್ಲಿ ಇದ್ದ ವೀರೇಂದ್ರ ಹೆಗ್ಗಡೆಯವರ ಕನಸಿನ ಕೂಸಾದ ರುಡ್‌ಸೆಟ್ ಸಂಸ್ಥೆಯಲ್ಲಿ ನಿರ್ದೇಶಕನಾಗಿದ್ದೆ. ಆಗ ಜಿಲ್ಲೆಯಲ್ಲಿ ಅಕ್ಷರವಾಣಿ ಕಾರ್ಯಕ್ರಮ ಸದೃಢವಾಗಿ ಪ್ರಾರಂಭವಾಯಿತು. ಅದಕ್ಕೆ ಕಾರಣ ಆಗ ಜಿಲ್ಲೆಯಲ್ಲಿ ಬಿ.ಜಿ.ವಿ.ಎಸ್ ಮತ್ತು ಕ.ರಾ.ವಿ.ಪ. ಬಹಳ ಸಕ್ರಿಯವಾಗಿ ಇದ್ದದ್ದು. ಚಳ್ಳಕೆರೆಯವರಾದ ನನ್ನದೇ ಹೆಸರಿನ ಚಳ್ಳಕೆರೆ ಯರ್ರಿಸ್ವಾಮಿಯವರು ಚಿತ್ರದುರ್ಗ ಭಾಗದಲ್ಲಿ ನೇತೃತ್ವ ವಹಿಸಿದರೆ ದಾವಣಗೆರೆ ಭಾಗದಲ್ಲಿ ಮುಂಚೂಣಿಗೆ ನಿಂತವರು ಷಡಾಕ್ಷರಪ್ಪನವರು.

ಜಿಲ್ಲೆಯಲ್ಲಿ ಯಾವುದೇ ಭಾಗದಲ್ಲಿ ಚಟುವಟಿಕೆಗಳು ನಡೆಯಲಿ ಮೊದಲು ಬೆಳಕು ಕಾಣುತ್ತಿದ್ದುದು ಜನತಾವಾಣಿಯಲ್ಲಿ. ಅಂತಹ ಮುತುವರ್ಜಿಯನ್ನು ಅವರು ವಹಿಸುತ್ತಿದ್ದರು. ದಾವಣಗೆರೆ, ಹರಿಹರದಲ್ಲಿ ಒಂದು ದೊಡ್ಡ ತಂಡವನ್ನೇ ಇವರು ಕಟ್ಟಿ ಬೆಳೆಸಿದರು. ಪ್ರಮುಖವಾಗಿ ಪ್ರೊ. ಸಿ.ವಿ ಪಾಟೀಲ್, ಬಾ.ಮ. ಬಸವರಾಜಯ್ಯ, ಪ್ರೊ. ಬಿ.ವಿ. ವೀರಭದ್ರಪ್ಪ, ಪೂಜಾರ್, ಎಂ.ಆರ್. ಆಲಿಖಾನ್, ಡಾ. ಐ.ಎ. ಲೋಕಾಪುರ, ಯಲ್ಲಪ್ಪ, ಪುರಂದರ ಲೋಕಿಕೆರೆ, ಗುರುಸಿದ್ಧ ಸ್ವಾಮಿ, ಸರಳ, ಸುನಂದಾ ಮುಂತಾದವರು ಈ ಯಜ್ಞದಲ್ಲಿ ತೊಡಗಿಸಿಕೊಳ್ಳುವಂತೆ ಆಯಿತು. ಅದೇ ರೀತಿ ಚಿತ್ರದುರ್ಗದ ಎಂ.ಟಿ. ಶಂಕರಪ್ಪ, ಶಂಕರಮೂರ್ತಿ, ಪ್ರೊ. ಯಾದವ ರೆಡ್ಡಿ, ಮಲ್ಲಿಕಾರ್ಜುನಯ್ಯ ನವರೂ ಮನಸ್ಸುಪೂರ್ವಕವಾಗಿ ಇದರಲ್ಲಿ ತೊಡಗಿಸಿಕೊಂಡರು. ಈ ಎಲ್ಲಾ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಗಿ ಕಾಣಿಸಿಕೊಂಡದ್ದು ದೊಡ್ಡ ಉಳ್ಳಾರ್ತಿ ಫಾರ್ಮ್‌ನಲ್ಲಿದ್ದ ರುಡ್‌ಸೆಟ್ ಸಂಸ್ಥೆ. ಅದಕ್ಕೆ ಕಾರಣ ಜಿಲ್ಲೆಯ ಎಲ್ಲಾ ಚಟುವಟಿಕೆಗಳ ಪೂರ್ವಭಾವಿ ಸಭೆಗಳು, ಸೂಕ್ತ ತರಬೇತಿಗಳು ನಡೆಯುತ್ತಿದ್ದುದು ಇಲ್ಲಿಯೇ. ಮಾನ್ಯ ಷಡಾಕ್ಷರಪ್ಪನವರು ಈ ಎಲ್ಲವುಗಳಲ್ಲಿಯೂ ತಪ್ಪದೇ ಭಾಗವಹಿಸುತ್ತಿದ್ದರು. ಅಲ್ಲದೇ ಸಮಯೋಚಿತ ಹಾಗೂ ಅರ್ಥಗರ್ಭಿತವಾದ ಸಲಹೆ, ಸೂಚನೆಗಳನ್ನು ನೀಡುತ್ತಿದ್ದರು.

ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ಅನೇಕ ಸಭೆ, ಸಮಾರಂಭಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿ, ವಿದ್ವತ್‌ಪೂರ್ಣ ಮಾತುಗಳನ್ನು ನುಡಿಯುತ್ತಿದ್ದರು. ನಾನು ಉಳ್ಳವರ್ತಿಯಿಂದ ನಾಯಕನಹಟ್ಟಿ ಕೆನರಾ ಬ್ಯಾಂಕಿಗೆ ವರ್ಗವಾಗಿ ಬಂದೆ. ಅವರು ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಿಗೆ ಹೋಗುವಾಗಲೆಲ್ಲ ತಪ್ಪದೇ ನಮ್ಮ ಮನೆಗೆ ಭೆಟ್ಟಿ ನೀಡುತ್ತಿದ್ದರು. ನನ್ನನ್ನೂ ಜೊತೆಯಲ್ಲಿ ಸಭೆಗಳಿಗೆ ಕರೆದೊಯ್ಯುತ್ತಿದ್ದರು. ಉಳ್ಳಾರ್ತಿ ಫಾರ್ಮ್‌ನಲ್ಲಿಯಂತೂ ರಾಜ್ಯದ ಕ.ರಾ.ವಿ.ಪ, ಬಿ.ಜಿ.ವಿ.ಎಸ್‌ನ ಹಿರಿಯರ ದಂಡೇ ಅಲ್ಲಿ ಸೇರುತ್ತಿತ್ತು. ಎಲ್ಲರಲ್ಲಿಯೂ ಒಂದು ಗೌರವದ ಭಾವನೆ ಬಿತ್ತಿದವರೆಂದರೆ ಷಡಾಕ್ಷರಪ್ಪನವರು. ಆಗ ಜಿಲ್ಲೆಯಲ್ಲಿ ಅಕ್ಷರವಾಣಿ, ಬಿ.ಜಿ.ವಿ.ಎಸ್, ಕ.ರಾ.ವಿ.ಪ, ವಿಜ್ಞಾನ ಕೇಂದ್ರ, ಬೀದಿ ನಾಟಕ, ಜಾನಪದ ಹಾಡುಗಾರರ ತಂಡಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುವಲ್ಲಿ ಮಾನ್ಯ ಷಡಾಕ್ಷರಪ್ಪನವರು ಮತ್ತು ಜನತಾವಾಣಿ ಪತ್ರಿಕೆಯ ಪಾತ್ರ ಅತ್ಯಂತ ಪ್ರಮುಖವಾದದು ಎಂಬುದನ್ನು ಎಂದೆಂದಿಗೂ ಮರೆಯಲಾಗದು.

ಭೌತಿಕವಾಗಿ ಅವರು ನಮ್ಮನ್ನು ಅಗಲಿರಬಹುದು. ಆದರೆ ವೈಚಾರಿಕ ಕೆಲಸಗಳ ಮೂಲಕ ಅವರು ಸದಾ ನಮ್ಮಲ್ಲಿ ಅಮರರಾಗಿಯೇ ಇದ್ದಾರೆ ಎಂಬುದಂತೂ ಸತ್ಯ.

**- ಎನ್.ಟಿ. ಎರ್ರಿಸ್ವಾಮಿ**
ವಿಶ್ರಾಂತ ರುಡ್‌ಸೆಟ್ ನಿರ್ದೇಶಕರು, ಜಗಳೂರು.
pramwsphd@gmail.com

---

**ಉಸಿರು ಉಸಿರಿನೊಂದಿಗೆ ನಿನ್ನ ಹೆಸರು ತಗೋತೀನಿ.**
**ಉಸಿರು ಉಸಿರಿನೊಂದಿಗೆ ನಿನ್ನ ಹೆಸರು ಬಿಡುತ್ತೀನಿ.**
**ಈ ಉಸಿರು ಇರುವವರೆಗೂ ನಿನ್ನ ಹೆಸರಿರಲಿ.**
**ನಿನ್ನ ಹೆಸರಿನಲ್ಲೇ (ಪತ್ರಿಕಾ ಕ್ಷೇತ್ರ) ನನ್ನ ಉಸಿರು ನಿಲ್ಲಲಿ**

**ಎಂಬ ಗೀತರಚನಾಕಾರ ಇಟಗಿ ಈರಣ್ಣನವರ ಗೀತೆ ನಿಜಕ್ಕೂ ಹೆಚ್ಚೆನ್ನೆಸ್ ಅಂಥವರಿಗೆ ಸೂಕ್ತ ಸಾಲುಗಳೆಂಬುದರಲ್ಲಿ ಅರ್ಥವಿದೆ. ಆಗಿನ ದಿನಗಳಲ್ಲಿ ನಮ್ಮಂತಹ ಯುವಕರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡುತ್ತಿದ್ದುದನ್ನು ಮರೆಯಲಾಗದ ದಿನದ ಕ್ಷಣಗಳು. ದೇವರು ಸ್ವರ್ಗದಲ್ಲಿಯೂ ಅವರಿಗೆ ಒಳ್ಳೆಯ ಸ್ಥಾನ ಅನುಗ್ರಹಿಸಲಿ ಎಂಬ ಪ್ರಾರ್ಥನೆಯೊಂದಿಗೆ**


**- ಕೆ. ಸಿರಾಜ್ ಅಹಮ್ಮದ್,** ಸಂತೇಬೆನ್ನೂರು.

---

ದಾವಣಗೆರೆ ಜಿಲ್ಲೆ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಮನೆಮಾತಾಗಿರುವ ಅತ್ಯಂತ ಜನಪ್ರಿಯ ದಿನಪತ್ರಿಕೆಯಾದ 'ಜನತಾವಾಣಿ' ಸಂಸ್ಥಾಪಕ ಸಂಪಾದಕರು, ಸಮಾಜಮುಖಿ ಚಿಂತನೆಯ, ಕಾರ್ಮಿಕ ವರ್ಗದ ಹಿತಚಿಂತಕರು, ನೇರ ನಡೆ, ನುಡಿ ಹಾಗೂ ನಿಷ್ಠೂರವಾದಿಯಾಗಿದ್ದ ಲಿಂಗೈಕ್ಯ ಹೆಚ್.ಎನ್.ಷಡಾಕ್ಷರಪ್ಪ ಅವರ 10 ನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರಿಗಿದೋ ಗೌರವಪೂರ್ಣ ಶ್ರದ್ಧಾಂಜಲಿ...

**- ಕೆ.ರಾಘವೇಂದ್ರ ನಾಯರಿ**

# ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳಿ



ದಾವಣಗೆರೆ, ಏ.29- ಎರಡನೇ ಅಲೆಯ ಕೊರೊನಾ ವೈರಸ್ ಸಾಕಷ್ಟು ಅವಾಂತರ ಸೃಷ್ಟಿಸುತ್ತಿದೆ. ಆದ್ದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಎಂದು ಮಾಯಕೊಂಡ ವಿಧಾನಸಭಾ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ ತಿಳಿಸಿದರು.

ರೂಪಾಂತರಿ ವೈರಸ್ ಎಲ್ಲೆಡೆ ವೇಗವಾಗಿ ಹರಡುತ್ತಿದೆ. ನನ್ನ ಕ್ಷೇತ್ರದಲ್ಲಿ ಕೋವಿಡ್‌ನಿಂದಾಗಿ ಇಬ್ಬರು ಸಾವನ್ನಪ್ಪಿದ್ದಾರೆ. ಈಗಾಗಲೇ ಮೊದಲ ಅಲೆ ಸಾಕಷ್ಟು ಅನಾಹುತ ಉಂಟು ಮಾಡಿದೆ. ಹಾಗಾಗಿ ಜನರು ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು. ಮೊದಲ ಹಂತದ ಲಸಿಕೆ ಪಡೆದವರು 2ನೇ ಡೋಸ್ ಪಡೆಯಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಸರ್ಕಾರವು ಕೊರೊನಾ ಪೀಡಿತರಿಗೆ ಅಗತ್ಯ ಬೆಡ್ ವ್ಯವಸ್ಥೆ ಮಾಡಬೇಕು. ವೆಂಟಿಲೇಟರ್, ಆಕ್ಸಿಜನ್ ಕೊರತೆಯಾಗದಂತೆ ಕ್ರಮವಹಿಸಬೇಕು. ಅಗತ್ಯವಾಗಿ ಬೇಕಾಗಿರುವ ವ್ಯಾಕ್ಸಿನ್ ಪೂರೈಸಬೇಕು ಎಂದು ಒತ್ತಾಯಿಸಿದ ಅವರು, ಜಿಲ್ಲಾಡಳಿತ ಹೆಚ್ಚುವರಿ ಲಸಿಕಾ ಕೇಂದ್ರ ತೆರೆದು ಲಸಿಕೀಕರಣ ಹೆಚ್ಚಿಸುವತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ದೇವೇಂದ್ರಪ್ಪ ಶ್ಯಾಗಲೆ, ಅಶೋಕ್ ಗೋಪನಾಳ್, ತ್ಯಾವಣಿಗೆ ಕೃಷ್ಣಕುಮಾರ್ ಇದ್ದರು.

# ಕೊರೊನಾ ಪಾಸಿಟಿವ್ ಎಂದು ಪರಿಗಣನೆ

**(1ನೇ ಪುಟದಿಂದ)** ಆಸ್ಪತ್ರೆಗೆ ದಾಖಲಿಸಲು ಸಮಸ್ಯೆಯಾಗುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಹಾಗೂ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಉದ್ದೇಶದಿಂದ ರೋಗ ಲಕ್ಷಣಗಳನ್ನು ಪರಿಗಣಿಸುವ ವಿಧಾನ ಅನುಸರಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ವಿಧಾನದಲ್ಲಿ ಸಂಬಂಧಪಟ್ಟ ವೈದ್ಯರು ಅಥವಾ ವೈದ್ಯಾಧಿಕಾರಿಗಳೇ ರೋಗಿಗಳ ಸ್ಥಿತಿಯನ್ನು ಪ್ರಮಾಣೀಕರಿಸುತ್ತಾರೆ. ನಂತರ ರೋಗಿಗೆ ಪ್ರತ್ಯೇಕ ಸಂಖ್ಯೆಯನ್ನು ನೀಡಿ ಗುರುತಿಸಿ, ನಿರ್ದಿಷ್ಟ ಆಸ್ಪತ್ರೆಯಲ್ಲಿ ಹಾಸಿಗೆ ಲಭ್ಯವಾಗಿಸಲಾಗುತ್ತದೆ. ಇವರನ್ನು ಕೊರೊನಾ ರೋಗಿ ಎಂದೇ ಪರಿಗಣಿಸಲಾಗಿತ್ತದೆ. ರೋಗಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಬೇಕಿರುವುದರಿಂದ ಈ ವಿಧಾನವನ್ನು ಅನುರಿಸಲು ನಿರ್ಧರಿಸಲಾಗಿದೆ. ಹೇಳಿದ್ದಾರೆ.

2ನೇ ಕೊರೊನಾ ಅಲೆಯಲ್ಲಿ ರೋಗ ಲಕ್ಷಣಗಳಿದ್ದರೂ ಪರೀಕ್ಷೆ ನಡೆಸಿದಾಗ ನೆಗೆಟಿವ್ ಕಂಡು ಬರುವವರ ಸಂಖ್ಯೆ ಹೆಚ್ಚಾಗಿತ್ತು. ಇಂತಹ ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಸಮಸ್ಯೆ ಎದುರಿಸಿದ ಉದಾಹರಣೆಗಳೂ ಇದ್ದವು. ಅಲ್ಲದೇ ಸೋಂಕಿದ್ದರೂ ನೆಗೆಟಿವ್ ಪ್ರಮಾಣ ಪತ್ರ ನೀಡುವುದರಿಂದ ಇತರರಿಗೂ ಸೋಂಕಿನ ಅಪಾಯವಿತ್ತು.

# ಐವರು ಎಡಿಜಿಪಿಗಳ ನೇಮಕ

**(1ನೇ ಪುಟದಿಂದ)** ಇರಿಸಲಾಗಿದೆ. ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದೆ. ರಾಜ್ಯದ ಎಲ್ಲಾ ಕಾರಾಗೃಹ ಗಳಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸುತ್ತಿರುವುದಾಗಿ ಅವರು ತಿಳಿಸಿದರು. ಮೇಡ್ ಇನ್ ಬಾಂಗ್ಲಾದೇಶ ಎಂದು ಹೆಸರಿರುವ ರೆಮ್ ಡಿಸಿವಿರ್ ಔಷಧಿ ಮಾರಾಟ ಪ್ರಕರಣವನ್ನು ಸಿಸಿಬಿ ಪೊಲೀಸರು ಪತ್ತೆ ಹಚ್ಚಿದ್ದಾರೆ. ಈ ಸಂಬಂಧ ಕೆಲವರನ್ನು ಬಂಧಿಸಲಾಗಿದೆ. ಈ ಔಷಧ ಬೆಂಗಳೂರಿಗೆ ಹೇಗೆ ಬಂತು? ಯಾವ ಆಸ್ಪತ್ರೆಯಿಂದ ಬಂತು? ಇದನ್ನು ಇಲ್ಲಿಗೆ ತಂದ ವ್ಯಕ್ತಿ ಯಾರು? ಎಂಬುದರ ಕುರಿತು ತನಿಖೆ ನಡೆಯುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

# ಬಂಗಾರದ ಬೇಡಿಕೆ 37% ಹೆಚ್ಚಳ

## ಜನವರಿ - ಮಾರ್ಚ್ ಚತುರ್ಥದಲ್ಲಿ 140 ಟನ್ ಬೇಡಿಕೆ

ಮುಂಬೈ, ಏ. 29 - ಕಳೆದ ಜನವರಿ - ಮಾರ್ಚ್ ಚತುರ್ಥದಲ್ಲಿ ಬಂಗಾರದ ಬೇಡಿಕೆ ಶೇ.37ರಷ್ಟು ಹೆಚ್ಚಾಗಿ 140 ಟನ್‌ಗಳಿಗೆ ತಲುಪಿದೆ. ಕೊರೊನಾ ನಿರ್ಬಂಧಗಳನ್ನು ಸಡಿಲಿಸಿದ್ದು ಹಾಗೂ ಬಂಗಾರದ ಬೆಲೆ ಕಡಿಮೆಯಾಗಿದ್ದು ಇದಕ್ಕೆ ಕಾರಣವಾಗಿದೆ ಎಂದು ವರ್ಲ್ಡ್ ಗೋಲ್ಡ್ ಕೌನ್ಸಿಲ್ (ಡಬ್ಲ್ಯೂ.ಜಿ.ಸಿ.) ತಿಳಿಸಿದೆ.

2020ರ ಜನವರಿ - ಮಾರ್ಚ್ ಚತುರ್ಥದಲ್ಲಿ ಭಾರತದಲ್ಲಿ ಬಂಗಾರದ ಬೇಡಿಕೆ 102 ಟನ್‌ಗಳಷ್ಟಿತ್ತು.

ಬಂಗಾರದ ಮೌಲ್ಯ ಪರಿಗಣಿಸಿದಾಗ ಇದೇ ಅವಧಿಯಲ್ಲಿ ಬೇಡಿಕೆ ಶೇ.57ರಷ್ಟು ಹೆಚ್ಚಾಗಿದೆ. 2020ರಲ್ಲಿ 37,580 ಕೋಟಿ ರೂ. ಮೌಲ್ಯದ ಬಂಗಾರ ಆಮದಾಗಿದ್ದರೆ, ಈ ವರ್ಷ 58,800 ಕೋಟಿ ರೂ. ಮೌಲ್ಯದ ಬಂಗಾರ ಆಮದಾಗಿದೆ.

ಆಭರಣಗಳ ಬೇಡಿಕೆ 2020ರ ಜನವರಿ - ಮಾರ್ಚ್‌ನಲ್ಲಿ 73.9 ಟನ್‌ಗಳಷ್ಟಿದ್ದರೆ, ಅದು ಈ ವರ್ಷ ಶೇ.39ರಷ್ಟು ಹೆಚ್ಚಾಗಿ 102.5 ಟನ್‌ಗಳಿಗೆ ತಲುಪಿದೆ.

ಮೌಲ್ಯದಲ್ಲಿ ಆಭರಣ ಬೇಡಿಕೆ ಶೇ.58ರಷ್ಟು ಹೆಚ್ಚಾಗಿ, 27,230 ಕೋಟಿ ರೂ.ಗಳಿಂದ 43,100 ಕೋಟಿ ರೂ.ಗಳಿಗೆ ತಲುಪಿದೆ. ಈ ಚತುರ್ಥದಲ್ಲಿ ಬಂಗಾರದ ಮೇಲಿನ ಹೂಡಿಕೆಯ ಬೇಡಿಕೆ ಶೇ.34ರಷ್ಟು ಹೆಚ್ಚಾಗಿ 28.1 ಟನ್‌ಗಳಿಂದ 37.5 ಟನ್‌ಗಳಿಗೆ ತಲುಪಿದೆ. ಮೌಲ್ಯದಲ್ಲಿ 10,350 ಕೋಟಿ ರೂ.ಗಳಿಂದ ಹೆಚ್ಚಾಗಿ 15,780 ಕೋಟಿ ರೂ.ಗಳಿಗೆ ತಲುಪಿದೆ.

ದೇಶದಲ್ಲಿ ಬಂಗಾರದ ಮರು ಬಳಕೆ ಶೇ.20ರಷ್ಟು ಕಡಿಮೆಯಾಗಿ 18.5 ಟನ್‌ಗಳಿಂದ 14.8 ಟನ್‌ಗಳಿಗೆ ಇಳಿಕೆಯಾಗಿದೆ. 2021ರ ಜನವರಿ - ಮಾರ್ಚ್ ಅವಧಿಯಲ್ಲಿ ಬಂಗಾರದ ಒಟ್ಟು ಆಮದು 301 ಟನ್‌ಗಳಷ್ಟಾಗಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ 83.1 ಟನ್ ಬಂಗಾರ ಆಮದಾಗಿತ್ತು. ಆಮದಿನಲ್ಲಿ ಶೇ.262ರಷ್ಟು ಹೆಚ್ಚಳವಾಗಿದೆ.

ಕೊರೊನಾ ನಿಯಂತ್ರಣಕ್ಕೆ ಬಂದಿದ್ದ ಹಾಗೂ ಲಸಿಕೆಯಿಂದ ಸಕಾರಾತ್ಮಕ ವಾತಾವರಣದ ಕಾರಣದಿಂದಾಗಿ 2021ರ ಮೊದಲ ಚತುರ್ಥದಲ್ಲಿ ಬಂಗಾರದ ಬೇಡಿಕೆ ಹೆಚ್ಚಾಗಿತ್ತು. ಬಂಗಾರದ ಬೆಲೆ 10 ಗ್ರಾಂಗಳಿಗೆ 47,000 ರೂ.ಗಳವರೆಗೆ ಇಳಿಕೆಯಾಗಿದ್ದೂ ಸಹ ಖರೀದಿದಾರರಲ್ಲಿ ಉತ್ಸಾಹಕ್ಕೆ ಕಾರಣವಾಗಿತ್ತು ಎಂದು ಡಬ್ಲ್ಯೂ.ಜಿ.ಸಿ. ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸೋಮಸುಂದರಂ ತಿಳಿಸಿದ್ದಾರೆ. 2020ಕ್ಕೆ ಹೋಲಿಸಿದರೆ 2021ರ ಮೊದಲ ಚತುರ್ಥದಲ್ಲಿ ಬಂಗಾರದ ಬೆಲೆ ಶೇ.14ರಷ್ಟು ಹೆಚ್ಚಾಗಿತ್ತು. ಆದರೆ, 2020ರ ಕೊನೆಯ ತಿಂಗಳುಗಳಿಗೆ ಹೋಲಿಸಿದರೆ ಬೆಲೆ ಶೇ.16ರಷ್ಟು ಕಡಿಮೆಯಾಗಿತ್ತು.

ಬಂಗಾರದ ಬೆಲೆ 50 ಸಾವಿರಕ್ಕೂ ಕಡಿಮೆ ಹಂತಕ್ಕೆ ಬಂದಿದ್ದರಿಂದ ಗ್ರಾಹಕರಲ್ಲಿ ಮಾನಸಿಕ ಅಡ್ಡಿ ತೆರವಾಗಿದ್ದು, ಬೇಡಿಕೆ ಹೆಚ್ಚಾಗಿದೆ. ದೇಶದಲ್ಲಿ ಚಿಲ್ಲರೆ ಬಂಗಾರದ ಹೂಡಿಕೆ ಬೇಡಿಕೆ ಸತತ ಮೂರು ಚತುರ್ಥಗಳಿಂದ ಹೆಚ್ಚಾಗಿದೆ. ಬಂಗಾರದ ಬಾರ್ ಹಾಗೂ ನಾಣ್ಯದ ಬೇಡಿಕೆ ಶೇ.34ರಷ್ಟು ಹೆಚ್ಚಾಗಿದೆ. 2015ರ ನಂತರದ ಚತುರ್ಥವೊಂದರಲ್ಲಿ ಬಂಗಾರದ ಬೇಡಿಕೆ ಇಷ್ಟೊಂದು ಹೆಚ್ಚಾಗಿರುವುದು ಇದೇ ಮೊದಲು ಎಂದವರು ಹೇಳಿದ್ದಾರೆ.

ಈ ಚತುರ್ಥದಲ್ಲಿ ಬಂಗಾರದ ಆಮದು ಸುಂಕ ಇಳಿಕೆಯಾದ ಜೊತೆಗೆ ರೂಪಾಯಿ ಮೌಲ್ಯವೂ ಹೆಚ್ಚಾಗಿತ್ತು. ಇದು ಹೂಡಿಕೆದಾರರಿಗೆ ಅವಕಾಶ ಹೆಚ್ಚಿಸಿತ್ತು ಎಂದು ಸೋಮಸುಂದರಂ ಹೇಳಿದ್ದಾರೆ.

ಆದರೆ, ಮುಂಬರುವ ಚತುರ್ಥದಲ್ಲಿ ಪರಿಸ್ಥಿತಿ ಎಚ್ಚರಿಕೆಯಿಂದ ಕೂಡಿದೆ. ಮತ್ತೆ ಲಾಕ್‌ಡೌನ್‌ಗಳನ್ನು ಹೇರಲಾಗುತ್ತಿದೆ ಮತ್ತು ಗ್ರಾಹಕರ ವಿಶ್ವಾಸ ಕುಂದಿದೆ. ಇದು ಎರಡನೇ ಚತುರ್ಥದಲ್ಲಿ ಮದುವೆ ಸಂದರ್ಭದಲ್ಲಿ ಖರೀದಿಸುವ ಬಂಗಾರದ ಬೇಡಿಕೆ ಕಡಿಮೆ ಮಾಡಬಹುದು ಎಂದವರು ಹೇಳಿದ್ದಾರೆ.

## ಭಾರತದಿಂದ ತನ್ನ ನಾಗರಿಕರು ವಾಪಸ್ಸಾಗಲು ಅಮೆರಿಕ ಸಲಹೆ

ನವದೆಹಲಿ, ಏ. 29 - ಭಾರತದಲ್ಲಿರುವ ತನ್ನ ನಾಗರಿಕರು ಆದಷ್ಟು ಶೀಘ್ರ ವಾಪಸ್ ಬರಬೇಕು ಎಂದು ಅಮೆರಿಕ ಸಲಹೆ ನೀಡಿದೆ.

ಅಮೆರಿಕದ ಜನ ಭಾರತಕ್ಕೆ ಪ್ರಯಾಣ ಮಾಡಬಾರದು ಎಂದು ಹೇಳಿರುವ ಅಮೆರಿಕ, ಭಾರತದ ಪ್ರಯಾಣದ ಸಲಹೆಯನ್ನು ನಾಲ್ಕನೇ ಹಂತದ ಎಚ್ಚರಿಕೆ ಮಟ್ಟದಲ್ಲಿರಿಸಿದೆ.

ಭಾರತದಲ್ಲಿ ಎಲ್ಲಾ ರೀತಿಯ ಔಷಧಿ ಸೇವೆಯ ಲಭ್ಯತೆ ಸೀಮಿತವಾಗಿದೆ. ಹೀಗಾಗಿ ಅಲ್ಲಿರುವ ಅಮೆರಿಕನ್ನರು ವಾಪಸ್ಸಾಗುವುದು ಸೂಕ್ತ ಎಂದು ತಿಳಿಸಲಾಗಿದೆ.

ಈ ನಡುವೆ, ಭಾರತದಿಂದ ದಕ್ಷಿಣ ಆಫ್ರಿಕಾಗೆ ಕೊರೊನಾ ಸೋಂಕು ಬರುವ ಯಾವುದೇ ನೇರ ಅಪಾಯ ಇಲ್ಲ ಎಂದು ಅಲ್ಲಿನ ಆರೋಗ್ಯ ಸಚಿವ ಜ್ವೆಲಿ ಮೆಕಿಜೆ ತಿಳಿಸಿದ್ದಾರೆ. ಭಾರತೀಯರು ಬೇರೆ ದೇಶಗಳ ಮೂಲಕ ಬರುವಾಗ ನಿಗಾ ವಹಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ ಎಂದವರು ತಿಳಿಸಿದ್ದಾರೆ.

ಭಾರತ ಹಾಗೂ ದಕ್ಷಿಣ ಆಫ್ರಿಕಾ ಎರಡರಿಂದ ಬರುವ ನಾಗರಿಕರ ಮೇಲೆ ಬೆಲ್ಜಿಯಂ ನಿಷೇಧ ಹೇರಿದೆ. ಈ ಹಿನ್ನೆಲೆಯಲ್ಲಿ ಮೆಕಿಜೆ ಹೇಳಿಕೆ ನೀಡಿದ್ದಾರೆ.

### ಜಿಲ್ಲೆಯಲ್ಲಿ 196 ಪಾಸಿಟಿವ್, 182 ಸೋಂಕು ಮುಕ್ತ

ದಾವಣಗೆರೆ, ಏ. 29 - ಜಿಲ್ಲೆಯಲ್ಲಿ 196 ಜನರಿಗೆ ಸೋಂಕು ತಲುಗಿದ್ದು, 182 ಜನರು ಸೋಂಕು ಮುಕ್ತರಾಗಿ ಬಿಡುಗಡೆ ಹೊಂದಿದ್ದಾರೆ. ದಾವಣಗೆರೆ ತಾಲ್ಲೂಕು 114, ಹರಿಹರ 24, ಜಗಳೂರು 11, ಚನ್ನಗಿರಿ 15, ಹೊನ್ನಾಳಿ 28 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1638ಕ್ಕೆ ಏರಿಕೆಯಾಗಿದೆ.

## ಕೋವಿಡ್ ಮಾರ್ಗಸೂಚಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ

### ಜಿಲ್ಲಾಡಳಿತಕ್ಕೆ ಸಂಸದ ಸಿದ್ದೇಶ್ವರ ಸೂಚನೆ

ದಾವಣಗೆರೆ, ಏ. 29- ಕೋವಿಡ್ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ ಕಳೆದ ಮೂರು ದಿನಗಳಿಂದ ಜಾರಿಗೊಳಿಸಿರುವ ಲಾಕ್‌ಡೌನ್ ವ್ಯವಸ್ಥೆಯನ್ನು ಪರಿಣಾಮಕಾರಿಯನ್ನಾಗಿಸಿ. ಜೊತೆಗೆ ಸೋಂಕಿತರ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಿ ಎಂದು ಸಂಸದ ಡಾ.ಜಿ.ಎಂ. ಸಿದ್ದೇಶ್ವರ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೊಂದಿಗೆ ಲಾಕ್‌ಡೌನ್ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡ ಸಂಸದರು, ನಗರದಲ್ಲಿ ಕಾರಣವಿಲ್ಲದೇ ಅಡ್ಡಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ, ಸಕಾರಣದಿಂದ ರಸ್ತೆಗಿಳಿಯುವವರಿಗೆ ಯಾವುದೇ ತೊಂದರೆ ಕೊಡಬೇಡಿ ಎಂದರು.



ಹೋಂ ಐಸೋಲೇಷನ್ ನಲ್ಲಿರುವ 884 ಜನ ಸೋಂಕಿತರ ಬಗ್ಗೆ ಹೆಚ್ಚಿನ ನಿಗಾ ವಹಿಸಿ. ಅವರು ಯಾವುದೇ ಕಾರಣಕ್ಕೂ ಮನೆಯಿಂದ ಹೊರಬರದಂತೆ ನೋಡಿಕೊಳ್ಳಿ. ಹೋಂ ಐಸೋಲೇಷನ್‌ನಲ್ಲಿರುವವರ ಮನೆಯ ಮುಂದೆ ಒಂದು ಚಾರ್ಟ್ ಅಂಟಿಸಿ ಅಲ್ಲಿಗೆ ಭೇಟಿ ನೀಡುವ ಆಶಾ ಕಾರ್ಯಕರ್ತೆಯರು ಹಾಗೂ ವೈದ್ಯರು ಅದರ ಮೇಲೆ ಸಹಿ ಮಾಡಿ ಬರುವಂತೆ ಮಾಡಿ ಎಂಬ ಸಲಹೆ ನೀಡಿದರು.


ಬೆಂಗಳೂರು ನಗರ ಹಾಗೂ ಹೊರ ಜಿಲ್ಲೆಗಳಿಂದ ದಾವಣಗೆರೆ ಜಿಲ್ಲೆಗೆ ಆಗಮಿಸುವವರ ಮೇಲೆ ನಿಗಾ ಇಡುವಂತೆ ಎಸ್ಪಿ ಅವರಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಅಗತ್ಯವಿರುವ ರೆಮಿಡಿಸಿವಿರ್ ಇಂಜೆಕ್ಷನ್ ದಾಸ್ತಾನು ಇದೆ. ಅಗತ್ಯವಿರುವ ರೋಗಿಗಳಿಗೆ ಮಾತ್ರ ಈ ಇಂಜೆಕ್ಷನ್ ಬಳಸಲಾಗುತ್ತದೆ . ಜನ ಭಯಪಡುವ ಅಗತ್ಯವಿಲ್ಲ. ಇಂದು 8000 ಕೋವಿಡ್ ವ್ಯಾಕ್ಸಿನ್ ದಾವಣಗೆರೆ ಜಿಲ್ಲೆಗೆ ಪೂರೈಕೆಯಾಗಿದೆ.ಬೇಡಿಕೆ ಹೆಚ್ಚಾಗಿರುವ ಕಾರಣ ವ್ಯಾಕ್ಸಿನ್ ಪೂರೈಕೆಯಲ್ಲಿ ಸ್ವಲ್ಪ ವ್ಯತ್ಯಯ ಉಂಟಾಗಿದೆ. ಒಂದೆರಡು ದಿನಗಳಲ್ಲಿ ಮತ್ತೆ ವ್ಯಾಕ್ಸಿನ್ ಪೂರೈಕೆಯಾಗಲಿದೆ. ಜಿಲ್ಲೆಯ ಜನತೆ ಸಹಕರಿಸಬೇಕು ಎಂದು ಇದೇ ಸಂದರ್ಭದಲ್ಲಿ ಸಂಸದರು ಮನವಿ ಮಾಡಿಕೊಂಡರು.

ಎ.ಪಿ.ಎಂ.ಸಿ ಮಾರುಕಟ್ಟೆಯನ್ನು 10 ಗಂಟೆಯ ನಂತರ ವಿಸ್ತರಣೆ ಮಾಡುವ ಬಗ್ಗೆ ಇಂದು ಮುಖ್ಯಮಂತ್ರಿಗಳ ಜೊತೆ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಅನುಮತಿ ಕೇಳಲಾಗಿದ್ದು, ಕೃಷಿ ಮಾರುಕಟ್ಟೆ ಸಚಿವರು ಇದಕ್ಕೆ ಅನುಮತಿ ನೀಡಲಿಲ್ಲ ಎನ್ನುವ ವಿಷಯವನ್ನು ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಸಂಸದರ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಇತರರು ಉಪಸ್ಥಿತರಿದ್ದರು.

## ಅಗತ್ಯವಿರುವವರಿಗೆ ಮಾತ್ರ ಕೋವಿಡ್ ಪರೀಕ್ಷೆ ನಡೆಸಿ : ಜಿಲ್ಲಾಧಿಕಾರಿ



ದಾವಣಗೆರೆ, ಏ. 29- ಕೋವಿಡ್ ಪರೀಕ್ಷೆ ಮಾಡಲು ಇರುವ 36 ತಂಡಗಳನ್ನು ಸಮರ್ಪಕವಾಗಿ ಬಳಸಿಕೊಂಡು ಎಸ್ಎಆರ್‌ಐ (ಸಾರಿ) ಮತ್ತು ಐಎಲ್ಐ ಪ್ರಕರಣಗಳು ಹಾಗೂ ಸೋಂಕಿತರ ಮನೆಯವರಿಗೆ ಮಾತ್ರ ಪರೀಕ್ಷೆ ಮಾಡಬೇಕು. ಉಳಿದಂತೆ ಬೇರೆಯವರಿಗೆ ಅನಗತ್ಯ ಪರೀಕ್ಷೆ ಮಾಡಿದ್ದು ಗಮನಕ್ಕೆ ಬಂದರೆ ಅದಕ್ಕೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ನೇರ ಹೊಣೆಯಾಗಲಿದ್ದು, ಅವರಿಂದ ಹಣ ವಸೂಲಿ ಮಾಡಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಎಚ್ಚರಿಸಿದರು.

ಜಿಲ್ಲೆಗಳಲ್ಲಿ ಕೋವಿಡ್ ಪರಿಸ್ಥಿತಿ ಹಾಗೂ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಬಳಿಕ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಜಿಲ್ಲಾಡಳಿತದ ಎಲ್ಲಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಸೋಂಕಿತರ ಮನೆಗಳಲ್ಲಿ ಉತ್ತಮ ವ್ಯವಸ್ಥೆ ಇದ್ದರೆ ಮನೆಗಳಲ್ಲೇ ಕ್ವಾರಂಟೈನ್ ಮಾಡಿ. ಉಳಿದಂತೆ ಹೋಂ ಐಸೋಲೇಶನ್ ಮಾಡಲು ಸೂಕ್ತ ವಾತಾವರಣ ಇಲ್ಲದ ಪಕ್ಷದಲ್ಲಿ ಅಂತಹವರನ್ನು ಕೋವಿಡ್ ಸೆಂಟರ್‌ಗೆ ಕರೆ ತಂದು ಚಿಕಿತ್ಸೆ ನೀಡಬೇಕಾಗಿರುವುದು ಆರೋಗ್ಯ ಇಲಾಖೆ ಜವಾಬ್ದಾರಿ ಎಂದರು.

ಗ್ರಾಮೀಣ ಭಾಗಗಳಲ್ಲಿ ಹಾಗೂ ನಗರವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಹೊರ ಜಿಲ್ಲೆಗಳಿಂದ ಬಂದವರ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಿಂದ ಬಂದವರ ಕುರಿತು ಆಯಾ ಗ್ರಾಮದ ಪಿಡಿಒ ಗಳು, ಆಶಾ ಕಾರ್ಯಕರ್ತೆಯರು ಸಂಬಂಧಪಟ್ಟ ಸಿಬ್ಬಂದಿಗಳು ಅವರ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ಸಂಗ್ರಹಿಸಬೇಕು ಮತ್ತು ಅವರ ಮೇಲೆ ಹೆಚ್ಚಿನ ನಿಗಾ ವಹಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್‌ನಾಯಕ್, ಎಡಿಸಿ ಪೂಜಾರ ವೀರಮಲ್ಲಪ್ಪ, ಎಸಿ ಮಮತಾ ಹೊಸಗೌಡರ್, ಜಿ.ಪಂ ಉಪಕಾರ್ಯದರ್ಶಿ ಆನಂದ್, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಎಸ್‌ಎಲ್‌ಓ ರೇಷ್ಮಾ ಹಾನಗಲ್, ಡಿಹೆಚ್‌ಓ ಡಾ.ನಾಗರಾಜ್, ಆರ್‌ಸಿಹೆಚ್‌ಓ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಡಾ.ಮೀನಾಕ್ಷಿ, ಡಾ.ರೇಣುಕಾರಾಧ್ಯ, ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

## ಫೇಸ್‌ಬುಕ್‌ನಲ್ಲಿ ಮೋದಿ ರಾಜೀನಾಮೆ ಪೋಸ್ಟ್‌ಗಳಿಗೆ ತಡೆ

### ತಪ್ಪಾಗಿ ಕ್ರಮ ಎಂದು ಸಾಮಾಜಿಕ ಜಾಲತಾಣ ಸ್ಪಷ್ಟನೆ

ನವದೆಹಲಿ, ಏ. 29 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸುವ ಪೋಸ್ಟ್‌ಗಳನ್ನು ಫೇಸ್‌ಬುಕ್ ತಡೆದಿದೆ. ಆದರೆ, ಕೆಲವೇ ಗಂಟೆಗಳ ನಂತರ ಪೋಸ್ಟ್‌ಗಳನ್ನು ಪ್ರಕಟಿಸಿದ್ದು, ತಪ್ಪಾಗಿ ಈ ಕ್ರಮ ತೆಗೆದುಕೊಳ್ಳಲಾಗಿತ್ತು ಎಂದು ಹೇಳಿದೆ.

ಸರ್ಕಾರದ ಪರವಾಗಿ ಪೋಸ್ಟ್‌ಗಳನ್ನು ತಡೆದಿರಲಿಲ್ಲ ಎಂದು ಫೇಸ್‌ಬುಕ್ ತಿಳಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ, ಸರ್ಕಾರ ಈ ಹ್ಯಾಶ್‌ಟ್ಯಾಗ್ ತೆಗೆಯಲು ಯಾವುದೇ ಸೂಚನೆ ನೀಡಿರಲಿಲ್ಲ. ತಪ್ಪಾಗಿ ಕಿತ್ತು ಹಾಕಿದ್ದಾಗಿ ಫೇಸ್‌ಬುಕ್ ಸ್ಪಷ್ಟನೆ ನೀಡಿದೆ ಎಂದು ತಿಳಿಸಿದೆ. ಬುಧವಾರ ರಾತ್ರಿ ಹಲವಾರು ಬಳಕೆದಾರರು ಪ್ರಧಾನ ಮಂತ್ರಿ ನರೇಂದ್ರ ಮೋದಿ ರಾಜೀನಾಮೆ ನೀಡಬೇಕು ಎಂಬ ಹ್ಯಾಶ್‌ಟ್ಯಾಗ್ ಶೋಧಿಸಿದಾಗ ಅದನ್ನು ತಡೆದಿರುವುದಾಗಿ ತಿಳಿಸಲಾಗಿತ್ತು.

ಕೆಲವು ಹ್ಯಾಶ್‌ಟ್ಯಾಗ್‌ಗಳನ್ನು ಫೇಸ್‌ಬುಕ್ ತಾನಾಗಿ ತೆಗೆದರೆ, ಇನ್ನು ಕೆಲವನ್ನು ಸ್ವಯಂ ಚಾಲಿತವಾಗಿ ಕಿತ್ತು ಹಾಕುವ ವ್ಯವಸ್ಥೆ ಇದೆ. ಕೊರೊನಾ ಪರಿಸ್ಥಿತಿ ಉಲ್ಬಣಿಸಿರುವ ನಡುವೆಯೇ, ಪ್ರಧಾನ ಮಂತ್ರಿ ನರೇಂದ್ರ ಮೋದಿ ರಾಜೀನಾಮೆ ನೀಡಬೇಕೆಂಬ ಒತ್ತಾಯಗಳು ಸಾಮಾಜಿಕ ಜಾಲತಾಣಗಳಲ್ಲಿ ಕೇಳಿ ಬರುತ್ತಿವೆ.

### ದಲಿತ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಣ್ಣಾಳ ಅಂಜಿನಪ್ಪ



ದಾವಣಗೆರೆ,ಏ.29- ಕರ್ನಾಟಕ ದಲಿತ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಶಾಮನೂರಿನ ಕಣ್ಣಾಳ ಅಂಜಿನಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಡಿ. ಶಿವಕುಮಾರ್ ತಿಳಿಸಿದ್ದಾರೆ.

## ಪ್ರತಿಭಟನೆ ವಿರುದ್ಧ ಪ್ರಕರಣ ; ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕು : ನ್ಯಾ. ಲೊಕುರ್

ನವದೆಹಲಿ, ಏ. 29 – ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಡಿತಗೊಳಿಸಿದಂತೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೊಕುರ್ ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ದೇಶದ್ರೋಹದ ಪ್ರಕರಣ ದಾಖಲಿಸುವುದು ಹೆಚ್ಚಾಗುತ್ತಿದೆ. ದೇಶದ್ರೋಹ ಗಂಭೀರ ಆರೋಪವಾಗಿದೆ. ಮಹಾತ್ಮ ಗಾಂಧೀಜಿ, ಲೋಕ ಮಾನ್ಯ ಬಾಲಗಂಗಾಧರ ತಿಲಕ್ ಅವರಂಥ ಸ್ವಾತಂತ್ರ್ಯ ಹೋರಾಟಗಾರರನ್ನು ದೇಶದ್ರೋಹಿಗಳೆಂದು ಆರೋಪಿಸಿದ್ದನ್ನು ನಾವು ನೋಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಜನ ಸಾಮಾನ್ಯರೂ ಸಹ ದೇಶದ್ರೋಹದ ಆರೋಪ ಎದುರಿಸುವಂತಾಗಿದೆ ಎಂದು ನ್ಯಾಯಮೂರ್ತಿ ಲೊಕುರ್ ಹೇಳಿದ್ದಾರೆ.

ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಪ್ರತಿಭಟನೆಗಳು ನಡೆದಾಗ 3,700 ಜನರ ವಿರುದ್ಧ 25 ಪ್ರಕರಣಗಳನ್ನು ದಾಖಲಿಸಲಾಗಿತ್ತು. ಹತ್ರಾಸ್ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದಲ್ಲಿ ಪ್ರತಿಭಟನೆ ನಡೆಸಿದ 33 ಜನರ ವಿರುದ್ಧ 22 ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಅತ್ಯಾಚಾರದ ವಿರುದ್ಧ ಪ್ರತಿಭಟನೆ ನಡೆಸಿದವರ ವಿರುದ್ಧ ದೇಶದ್ರೋಹದ ಆರೋಪ ಹೊರಿಸಲು ಸಾಧ್ಯವೇ? ಎಂದವರು ಪ್ರಶ್ನಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ತನ್ನ 88 ವರ್ಷದ ತಾತನಿಗಾಗಿ ಆಕ್ಸಿಜನ್ ಬೇಕೆಂದು ಟ್ವೀಟ್ ಮಾಡಿದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ನೆರವು ಕೇಳುವುದು ಅಪರಾಧ ಎನ್ನಲಾಗುತ್ತಿದೆ. ಈ ಮಾರ್ಗಗಳ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಡಿತಗೊಳಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ನ್ಯಾಯಾಂಗದ ಬಗ್ಗೆಯೂ ಕಳವಳ ವ್ಯಕ್ತಪಡಿಸಿರುವ ಅವರು, ನ್ಯಾಯಾಂಗ ಮೊದಲು ತನ್ನ ಮನೆಯನ್ನು ಸರಿಪಡಿಸಿಕೊಳ್ಳಬೇಕಿದೆ ಎಂದಿದ್ದಾರೆ.

### ಕಲ್ಲೇಶ್ವರ ಸ್ವಾಮಿಯ ಇಂದಿನ ತೇರು ರದ್ದು


ಜಗಳೂರು ತಾಲ್ಲೂಕಿನ ಕಲ್ಲೇದೇವರಪುರದಲ್ಲಿ ಇಂದು ನಡೆಯಬೇಕಾಗಿದ್ದ ಶ್ರೀ ಕಲ್ಲೇಶ್ವರ ಸ್ವಾಮಿಯ ರಥೋತ್ಸವವನ್ನು ರದ್ದು ಪಡಿಸಲಾಗಿದೆ ಎಂದು ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ. ಭಕ್ತರು ತಮ್ಮ ಮನೆಯಲ್ಲಿಯೇ ದೇವರನ್ನು ಆರಾಧಿಸಿ, ಪೂಜಿಸುವಂತೆ ಪದಾಧಿಕಾರಿಗಳು ಕೋರಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ : 30.04.2021
ಇಫ್ತೇಯಾರಿ ಸಮಯ : 6-48

ದಿನಾಂಕ 01.05.2021
ಸಹೇರಿ ಸಮಯ : 4-48




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte